ಸಂಪುಟ : 8 ಸಂಚಿಕೆ : 259 ಪುಟ : 4 ಬೆಲೆ : 3.00 ಗುರುವಾರ ನವ್ಹಂಬರ್ 23, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್


# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 259 Pages : 4 Price : 3.00 Thursday November 23, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಸತ್ಯಸಾಯಿಬಾಬಾ ಜನ್ಮದಿನ ಆಚರಣೆ ಇಂದು




■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರದ ಹಾತಲಗೇರಿ ರಸ್ತೆಯಲ್ಲಿರುವ ಶ್ರೀ ಸತ್ಯಸಾಯಿ ಸೇವಾ ಕ್ಷೇತ್ರದಲ್ಲಿ ನ.23, ಗುರುವಾರದಂದು ಸಾಯಂಕಾಲ 4 ಗಂಟೆಗೆ ಶ್ರೀ ಸತ್ಯಸಾಯಿ ಬಾಬಾರವರ 98ನೇ ಜನ್ಮದಿನವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

ತನ್ನಿಮಿತ್ತ ಭಜನೆ, ಮಹಾಮಂಗಳಾರತಿ ಮತ್ತು ಪ್ರಸಾದ ವಿತರಣೆ ಏರ್ಪಡಿಸಿದ್ದು, ಸಕಲ ಸದ್ಭಕ್ತರು ಪಾಲ್ಗೊಂಡು ಸತ್ಯಸಾಯಿಬಾಬಾ ಅವರ ಕೃಪೆಗೆ ಪಾತ್ರರಾಗಬೇಕೆಂದು ಪ್ರಕಟಣೆ ತಿಳಿಸಿದೆ.

### ನ.27ರಂದು ಧಾರವಾಡ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ

## ವಿಡಿಯೋ ಕಾನ್ಫರನ್ಸ್ ಮೂಲಕ ಪಿಂಚಣಿ ಅದಾಲತ್




■ವಿಜಯಸಾಕ್ಷಿ ಸುದ್ದಿ, ಧಾರವಾಡ

ಕರ್ನಾಟಕ ಮಹಾಲೇಖಪಾಲರ ಕಚೇರಿಯಿಂದ ನವೆಂಬರ್ 27 ರಂದು ಬೆಳಿಗ್ಗೆ 11 ಗಂಟೆಗೆ ಧಾರವಾಡ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ವಿಡಿಯೋ ಕಾನ್ಫರನ್ಸ್ ಮೂಲಕ ಪಿಂಚಣಿ ಅದಾಲತನ್ನು ಆಯೋಜಿಸಲಾಗಿದೆ.

ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆ ಮತ್ತು ಅಹವಾಲುಗಳಿಗೆ ಸಂಬಂಧಿಸಿದಂತೆ ಪಿಂಚಣಿ ಅದಾಲತದಲ್ಲಿ ಭಾಗವಹಿಸಿ ತಮ್ಮ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.

ಈ ಪಿಂಚಣಿ ಅದಾಲತಗೆ ಮಹಾಲೇಖಾಪಾಲರ ಕಚೇರಿಯಿಂದ ಡೆಪ್ಯೂಟಿ ಆಕೌಂಟೆಂಟ್ ಜನರಲ್, ಹಿರಿಯ ಲೆಕ್ಕಾಧಿಕಾರಿಗಳು ಹಾಗೂ ವ್ಯವಸ್ಥಾಪಕರು ಎಸ್.ಬಿ.ಐ (ಸಿ.ಪಿ.ಪಿ.ಸಿ), ಕೆನರಾ ಬ್ಯಾಂಕ್ (ಸಿ.ಪಿ.ಪಿ.ಸಿ), ಬ್ಯಾಂಕ್ ಆಫ್ ಬರೋಡ (ಸಿ.ಪಿ.ಪಿ.ಸಿ), ಯೂನಿಯನ್ ಬ್ಯಾಂಕ್ ಇಂಡಿಯಾ (ಸಿ.ಪಿ.ಪಿ.ಸಿ), ಮತ್ತು ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳ ಖಜಾನೆ ಇಲಾಖೆಯ ಉಪನಿರ್ದೇಶಕರು ಮತ್ತು ಸಹಾಯಕ ನಿರ್ದೇಶಕರು ಉಪಸ್ಥಿತರಿದ್ದು,

ಕಾರ್ಯಕ್ರಮದ ಸಮನ್ವಯ ಸಾಧಿಸುವರು. ಸಂಬಂಧಿಸಿದ ಜಿಲ್ಲೆಯ ಪಿಂಚಣಿದಾರರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸದುಪಯೋಗ ಪಡಿಸಿಕೊಳ್ಳಬೇಕೆಂದು ಧಾರವಾಡ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಸಭೆ

# ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಕ್ರಮ ವಹಿಸಿ

■ವಿಜಯಸಾಕ್ಷಿ ಸುದ್ದಿ, ವಿಜಯಪುರ

ಐತಿಹಾಸಿಕ ತಾಣಗಳಿಂದ ಕೂಡಿರುವ ವಿಜಯಪುರ ಜಿಲ್ಲೆಯಲ್ಲಿರುವ ಸ್ಮಾರಕಗಳ ರಕ್ಷಣೆ, ಸಂರಕ್ಷಣೆ ಸೇರಿದಂತೆ ಪ್ರವಾಸೋದ್ಯಮ ಉತ್ತೇಜನಕ್ಕೆ ಪೂರಕವಾಗಿ ಕ್ರಮವಹಿಸುವಂತೆ ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ

> ಜಿಲ್ಲೆಯಲ್ಲಿನ ಸ್ಮಾರಕಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಜಿಲ್ಲೆಯ ಸ್ಮಾರಕಗಳಿಗೆ ಹೆಚ್ಚೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಮೈಸೂರು ಮಾದರಿಯಲ್ಲಿ ಪಾರಂಪರಿಕ ಟಾಂಗಾ ಬಳಕೆಗೆ ಪ್ರೋತ್ಸಾಹ ನೀಡಬೇಕು. ನಗರದ ಗೋಲಗುಂಬಜ್ ಸ್ಮಾರಕದಲ್ಲಿ ಧ್ವನಿ-ಬೆಳಕಿನ ವ್ಯವಸ್ಥೆ ಕಲ್ಪಿಸಬೇಕು. ಸ್ಮಾರಕಗಳ ಆವರಣದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು, ಸ್ಮಾರಕಗಳ ರಕ್ಷಣೆಯೊಂದಿಗೆ ಪಾರಂಪರಿಕ ಕಲೆ, ಸಂಸ್ಕೃತಿಗಳನ್ನು ಅನಾವರಣಗೊಳಿಸುವಂತೆ ಕಾರ್ಯಕ್ರಮಗಳನ್ನು ಪ್ರತಿ ವಾರ ಹಮ್ಮಿಕೊಳ್ಳಬೇಕು.
>
> – ಎಚ್.ಕೆ. ಪಾಟೀಲ. ಪ್ರವಾಸೋದ್ಯಮ ಸಚಿವರು.



ಸಭಾಂಗಣದಲ್ಲಿ ಪ್ರವಾಸೋದ್ಯಮ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಭಾರತೀಯ ಪುರಾತತ್ವ ಇಲಾಖೆ, ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯ, ಪ್ರವಾಸೋದ್ಯಮ ಇಲಾಖೆ ಸೇರಿದಂತೆ ಎಲ್ಲ ಇಲಾಖೆಗಳು ಸಮನ್ವಯತೆಯಿಂದ, ಆಸಕ್ತಿ ವಹಿಸಿ ಕಾರ್ಯನಿರ್ವಹಿಸಬೇಕು. ಸ್ಮಾರಕಗಳ ರಕ್ಷಣೆಗೆ ಒತ್ತು ನೀಡಿ, ಸ್ಮಾರಕಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವಂತೆ ಸಚಿವರು ಸೂಚಿಸಿದರು.

ವಿಜಯಪುರ ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶಗಳಿದ್ದು, ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ನಿಡುವ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು ಗಂಭೀರತೆಯಿಂದ ಕಾರ್ಯ ನಿರ್ವಹಿಸಬೇಕು. ಜಿಲ್ಲೆಗೆ ಪ್ರವಾಸಿಗರು ಆಗಮಿಸಿದ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳ ಮಾಹಿತಿ, ವಿವಿಧ ಸ್ಮಾರಕಗಳಿಗೆ ಹೋಗಲು ಸಾರಿಗೆ ವ್ಯವಸ್ಥೆ, ಪ್ರವಾಸಿ ತಾಣಗಳಲ್ಲಿರುವ ವೈಶಿಷ್ಟ್ಯತೆ ಸೇರಿದಂತೆ ಸಮಗ್ರವಾದ ಮಾಹಿತಿಗಳನ್ನು ಪ್ರವಾಸಿಗರಿಗೆ ಒದಗಿಸಲು ಕ್ರಮ ವಹಿಸಬೇಕು. ಪ್ರವಾಸಿಗರಿಗೆ ಯಾವುದೇ ತೆ-ಂದರೆಯಾಗದಂತೆ ಅನುಕೂಲ ಕಲ್ಪಿಸುವ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಹೇಳಿದರು.

> ಜನವರಿ ತಿಂಗಳೊಳಗೆ ಐತಿಹಾಸಿಕ ಸ್ಮಾರಕಗಳನ್ನು ಅಧಿಸೂಚಿಸಲಾಗುತ್ತಿದ್ದು, ವಿಜಯಪುರ ನಗರದಲ್ಲಿ ಹಲವು ಸ್ಮಾರಕಗಳಿವೆ. ಮಹತ್ವದ ಸ್ಮಾರಕಗಳನ್ನು ಗುರುತಿಸಿ, ಅವುಗಳ ಪಟ್ಟಿ ಮಾಡಿ ಸಮೀಕ್ಷೆ ಕಾರ್ಯ ಕೈಗೊಂಡು ವರದಿ ಸಲ್ಲಿಸಬೇಕು. ಸ್ಮಾರಕಗಳ ರಕ್ಷಣೆ, ಸಂರಕ್ಷಣೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರವಷ್ಟೇ ಅಲ್ಲದೆ, ಸಾರ್ವಜನಿಕ ಸಹಭಾಗಿತ್ವ ಪಡೆದುಕೊಂಡು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿಗೆ ಕ್ರಮ ವಹಿಸಬೇಕು ಎಂದು ಸಚಿವ ಎಚ್.ಕೆ. ಪಾಟೀಲ ಸೂಚಿಸಿದರು.

▸▸3 ನೇ ಪುಟಕ್ಕೆ

### ಜಿಲ್ಲಾ ಚುನಾವಣಾಧಿಕಾರಿ ವೈಶಾಲಿ.ಎಂ.ಎಲ್. ಖಡಕ್ ಸೂಚನೆ

# ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯಲ್ಲಿ ಬೇಜವಾಬ್ದಾರಿ ಬೇಡ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ವಿಧಾನಸಭಾ ಕ್ಷೇತ್ರದ ನಿಯೋಜಿತ ಬಿ.ಎಲ್.ಓ ಹಾಗೂ ಮೇಲ್ವಿಚಾರಕರು ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣ ಮತ್ತು ಚುನಾವಣಾ ಕರ್ತವ್ಯದಲ್ಲಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು.

ಬೇಜವಾಬ್ದಾರಿಯಿಂದ ವರ್ತಿಸಿದಲ್ಲಿ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿ ವೈಶಾಲಿ ಎಂ.ಎಲ್. ಸೂಚಿಸಿದರು.

ಜಿಲ್ಲಾಡಳಿತ ಭವನದ ಮುಖ್ಯ ಸಭಾಂಗಣದಲ್ಲಿ 66-ಗದಗ ವಿಧಾನ ಸಭಾ ಮತ ಕ್ಷೇತ್ರದ ಎಲ್ಲ ಬಿ.ಎಲ್.ಓ ಹಾಗೂ ಮೇಲ್ವಿಚಾರಕರಿಗೆ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಕುರಿತಂತೆ ಜರುಗಿದ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರ್ಯವು ಎಲ್ಲ ಬಿ.ಎಲ್.ಓ ಗಳ ಉತ್ತಮ ಕಾರ್ಯನಿರ್ವಹಣೆಯಿಂದ ಪೂರ್ಣಗೊಳ್ಳಬೇಕು. ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಲೋಪಗಳಿಗೆ ಆಸ್ಪದ ನೀಡದೆ ಸರಿಯಾಗಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಮಾಡಬೇಕೆಂದು ತಿಳಿಸಿದರು.



ಮತದಾರರು ಮರಣ ಹೊಂದಿದಲ್ಲಿ ಪಟ್ಟಿಯಿಂದ ಹೆಸರನ್ನು ತೆಗೆದು ಹಾಕಲು, ಮತದಾರರ ಪಟ್ಟಿಯಲ್ಲಿರುವ ದೋಷಗಳನ್ನು ಸರಿಪಡಿಸಲು ನಮೂನೆ 8 ರಲ್ಲಿ ಅರ್ಜಿ ಸ್ವೀಕರಿಸಿ ಸರಿಪಡಿಸಬೇಕು. ದೋಷಮುಕ್ತ ಮತದಾರರ ಪಟ್ಟಿ ಸಿದ್ಧವಾಗುವಲ್ಲಿ ಬಿ.ಎಲ್.ಓ.ಗಳ ಪಾತ್ರ ಪ್ರಮುಖವಾಗಿದೆ. 18 ವರ್ಷ ವಯೋಮಾನ ಪೂರ್ಣಗೊಳಿಸಿದ ಪ್ರತಿಯೊಬ್ಬ ನಾಗರಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವ ಬಗ್ಗೆ ಖಾತರಿ ಪಡಿಸಿಕೊಳ್ಳಬೇಕು. ಬಿ.ಎಲ್.ಓ. ಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಅತ್ಯಂತ ಜಾಗರೂಕತೆಯಿಂದ ಮಾಡುವ ಮೂಲಕ ಚುನಾವಣಾ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದರು.

ಬಿ.ಎಲ್.ಓ.ಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರತಿ ಮತದಾರರ ಮನೆಗಳಿಗೂ ಖುದ್ದಾಗಿ ತೆರಳಿ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ವ್ಯಕ್ತಿ ವಾಸಿಸುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಬೇರೆಡೆಯಿಂದ ಬಂದು ವಾಸಿಸುವವರ ಹೆಸರು ನಮೂನೆ 6 ರಲ್ಲಿ ಅರ್ಜಿ ಸ್ವೀಕರಿಸಿ ನೋಂದಾಯಿಸಿಕೊಳ್ಳಬೇಕು. ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕಾರ್ಯವು ವಿಳಂಭ ಮಾಡದೇ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಜಿಲ್ಲಾ ಚುನಾವಣಾಧಿಕಾರಿ ವೈಶಾಲಿ. ಎಂ.ಎಲ್. ಹೇಳಿದರು.

ಬಿ.ಎಲ್.ಓ. ಹಾಗೂ ಮೇಲ್ವಿಚಾರಕರಿಗೆ ಜರುಗಿದ ತರಬೇತಿ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ತಹಸೀಲ್ದಾರ ಶ್ರೀನಿವಾಸಮೂರ್ತಿ ಕುಲಕರ್ಣಿ, ಶಿರೆಸ್ತೇದಾರ ಬಿ.ಎಸ್.ಕನ್ನೂರ, ಸೇರಿದಂತೆ ಗದಗ ವಿಧಾನ ಸಭಾ ಕ್ಷೇತ್ರದ ಬಿ.ಎಲ್.ಓ. ಹಾಗೂ ಮೇಲ್ವಿಚಾರಕರು ಹಾಜರಿದ್ದರು.



### ನಾಳೆಯಿಂದ ಕೊಪ್ಪಳದ ಗವಿಸಿದ್ಧೇಶ್ವರ ಮಹಾಸ್ವಾಮಿಗಳ ಆಧ್ಯಾತ್ಮಿಕ ಪ್ರವಚನ ಮಾಲಿಕೆ

# ಸದ್ಭಾವನಾ ಪಾದಯಾತ್ರೆ ಯಶಸ್ವಿಗೊಳಿಸಿ




■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ವಿದ್ಯಾದಾನ ಸಮಿತಿಯ ಮೈದಾನದಲ್ಲಿ ನ.24ರಿಂದ ಡಿಸೆಂಬರ್ 3ರವರೆಗೆ ಪ್ರತಿನಿತ್ಯ ಸಂಜೆ 6ರಿಂದ 7 ಗಂಟೆಯವರೆಗೆ ಕಾಲ ಕೊಪ್ಪಳ ಸಂಸ್ಥಾನ ಗವಿಮಠದ ಪೂಜ್ಯ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳ ಪ್ರವಚನ, ಪ್ರತಿದಿನ ಬೆಳಿಗ್ಗೆ 6.30ಕ್ಕೆ ಸದ್ಭಾವನಾ ಪಾದಯಾತ್ರೆ ನಡೆಯಲಿದೆ ಎಂದು ಆಧ್ಯಾತ್ಮ ಪ್ರವಚನ ಸಮಿತಿಯ ಅಧ್ಯಕ್ಷ, ಮಾಜಿ ಶಾಸಕ ಡಿ.ಆರ್. ಪಾಟೀಲ ಹೇಳಿದರು.

ಅವರು ಬುಧವಾರ ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ವಿವರಣೆ ನೀಡಿ, ನ. 24ರಂದು ಸಂಜೆ 5.30ಕ್ಕೆ ನಡೆಯುವ ಪ್ರವಚನ ಮಾಲಿಕೆಯ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ಗದಗ ತೋಂಟದಾರ್ಯ ಸಂಸ್ಥಾನಮಠದ ಜ.ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಗದುಗಿನ ಶಿವಾನಂದ ಮಠದ ಜ.ಅಭಿನವ ಶಿವಾನಂದ ಮಹಾಸ್ವಾಮಿಗಳು, ಹೊಸಳ್ಳಿಯ ಸಂಸ್ಥಾನಮಠದ ಜ.ಅಭಿನವ ಬೂದೀಶ್ವರ ಮಹಾಸ್ವಾಮಿಗಳು, ಗದಗ ವೀರೇಶ್ವರ ಪುಣ್ಯಾಶ್ರಮದ ಪೂಜ್ಯ ಡಾ.ಕಲ್ಲಯ್ಯಜ್ಜನವರು, ಗದಗ-ವಿಜಯಪುರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಪೂಜ್ಯ ನಿರ್ಭಯಾನಂದ ಸರಸ್ವತಿ ಮಹಾಸ್ವಾಮಿಗಳು, ಕಪ್ಪತ್ತಗುಡ್ಡದ ನಂದಿವೇರಿಮಠದ ಪೂಜ್ಯ ಶಿವಕುಮಾರ ಮಹಾಸ್ವಾಮಿಗಳು, ಗದಗ ಆಧ್ಯಾತ್ಮ ವಿದ್ಯಾಶ್ರಮದ ಪೂಜ್ಯ ಶಿವಶರಣೆ ಡಾ.ನೀಲಮ್ಮ ತಾಯಿಯವರು, ಬೆಟಗೇರಿಯ ಕುರುಹಿನಶೆಟ್ಟಿ ಸಮಾಜದ ಮೂಲಪೀಠದ ಜ.ನೀಲಕಂಠ ಪಟ್ಟದಾರ್ಯ ಮಹಾಸ್ವಾಮಿಗಳು ವಹಿಸುವರು.

▸▸3ನೇ ಪುಟಕ್ಕೆ

### ಪಾದಯಾತ್ರೆ ಎಲ್ಲೆಲ್ಲಿ?

ನ. 25: ಗದಗ ಒಕ್ಕಲಗೇರಿ ರಾಯಚೋಟಿ ವೀರಭದ್ರೇಶ್ವರ ದೇವಸ್ಥಾನದಿಂದ ಆರಂಭ. ಗಂಜಿ ಬಸವೇಶ್ವರ ಸರ್ಕಲ್, ಹೊನ್ನತ್ತೆಮ್ಮನ ದೇವಸ್ಥಾನ, ಕೇಶವದಾಸ ಸಾವಕಾರ ಲೈನ್, ವೀರನಾರಾಯಣ ಗುಡಿ, ವಿಭೂತಿ ಓಣಿ, ಗೆಳೆಯರ ಬಳಗ ಮಾರ್ಗವಾಗಿ ಶಾಲೆ ನಂ.8ಕ್ಕೆ ಮುಕ್ತಾಯ.

ನ. 26: ಗದಗ ಎಸ್.ಎಂ. ಕೃಷ್ಣಾ ನಗರದ ವರಸಿದ್ಧಿ ವಿನಾಯಕ ದೇವಸ್ಥಾನದಿಂದ ಆಟೋ ಕಾಲೋನಿ, ಸಿದ್ಧಮ್ಮನಹಳ್ಳಿಯವರ ಮನೆ, ಈಶ್ವರ ದೇವಸ್ಥಾನ, ಹನಮಂತ ದೇವಸ್ಥಾನ, ದುದ್ದುಗೌಡ ಪಾಟೀಲರ ಲೈನ್, ನಗರಸಭೆ ಕಾಂಪ್ಲೇಕ್ಸ್, ಚಿಕ್ಕನಗೌಡರ ಕಿರಾಣಿ ಹಾಗೂ ಕುಮಾರ ಕಿರಾಣಿ ಅಂಗಡಿ ಲೈನ್ ಮಾರ್ಗವಾಗಿ ಆದಿಶಕ್ತಿ ದೇವಸ್ಥಾನಕ್ಕೆ ಮುಕ್ತಾಯ.

ನ. 27: ಬೆಟಗೇರಿ ಹುಯಿಲಗೋಳ ರಸ್ತೆಯ ಬಾಲಾಜಿ ಮಂದಿರದಿಂದ ಬ್ಯಾಳಿಯವರ ಓಣಿ, ಗೌರಿ ಗುಡಿ, ಮಂಜುನಾಥ ದೇವಸ್ಥಾನ, ರಾಮದೇವರ ಗುಡಿ, ಬೆಲ್ಲದವರ ಮನೆ, ಮೇಹರವಾಡೆ ಓಣಿ, ಗಾಂಧಿ ಗುಡಿ, ಹೊಸಪೇಟ ಚಕ್ ಮಾರ್ಗವಾಗಿ ಬನಶಂಕರಿ ದೇವಸ್ಥಾನಕ್ಕೆ ಮುಕ್ತಾಯ.

ನ. 28: ಬೆಟಗೇರಿಯ ಒಕ್ಕಲಗೇರಿಯ ಬ್ರಹ್ಮದೇವರ ಗುಡಿಯಿಂದ ಉಸುಗಿನಕಟ್ಟೆ, ಕುರಹಟ್ಟಿ ಪೇಟೆ, ನೀಲಕಂಠ ಮಠ, ಶಿರಹಟ್ಟಿ ಓಣಿ, ಕಬಾಡಿ ಸಾಲು, ಶರಣ ಬಸವೇಶ್ವರ ದೇವಸ್ಥಾನ, ವೀರಭದ್ರೇಶ್ವರ ದೇವಸ್ಥಾನ, ಹಕಾರಿ ಗಲ್ಲಿ, ಗಾರ್ಗಿ ಪೇಟೆ ಮಾರ್ಗವಾಗಿ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಮುಕ್ತಾಯ.

ನ. 29ಕ್ಕೆ ಡಂಬಳ, 30ಕ್ಕೆ ಹುಯಿಲಗೋಳ, ಡಿಸೆಂಬರ್ 1ಕ್ಕೆ ಲಕ್ಕುಂಡಿ, ಡಿ. 2ಕ್ಕೆ ಕಬಲಾಯತಕಟ್ಟಿ ಹಾಗೂ ಡಿ. 3 ರಂದು ಹುಲಕೋಟಿ ಗ್ರಾಮದಲ್ಲಿ ಪಾದಯಾತ್ರೆ ಸಂಚರಿಸಿ ಮುಕ್ತಾಯಗೊಳ್ಳುವದು.

### ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಡಾ. ಕೃಷ್ಣಪ್ಪ ಪಿ. ಮಾಹಿತಿ

# ರಾಜ್ಯಮಟ್ಟದ ಯುವ ಸಂಸತ್ ನ.25ಕ್ಕೆ




■ವಿಜಯಸಾಕ್ಷಿ ಸುದ್ದಿ, ಗದಗ

ನ. 25ರಂದು ಬೆಳಗ್ಗೆ 10 ಗಂಟೆಗೆ ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆ-2023 ಕಾರ್ಯಕ್ರಮವು ಗದಗ ಜಿ.ಪಂ ಸಭಾಂಗಣದಲ್ಲಿ ಆರಂಭಗೊಳ್ಳಲಿದ್ದು, ಸಂಜೆ 3 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಡಾ. ಕೃಷ್ಣಪ್ಪ ಪಿ. ಹೇಳಿದರು.

ಬುಧವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸಂಸದೀಯ ವ್ಯವಹಾರಗಳ ಇಲಾಖೆ, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಹಾಗೂ ಶ್ರೀ ಅನ್ನದಾನೇಶ್ವರ ಪ.ಪೂ ಮಹಾವಿದ್ಯಾಲಯ ನರೇಗಲ್ ಇವರ ಸಹೋಯಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ರಾಜ್ಯದ ಪ್ರತಿ ಜಿಲ್ಲೆಯಿಂದ ಇಬ್ಬರು ಪ್ರತಿನಿಧಿಗಳಂತೆ ಒಟ್ಟು 64 ವಿದ್ಯಾರ್ಥಿಗಳು ಈ ಯುವ ಸಂಸತ್‌ನಲ್ಲಿ ಭಾಗಿಯಾಗಲಿದ್ದಾರೆ. ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿಧಾನಸಭೆ ಕಲಾಪದ ಮಾದರಿಯಲ್ಲಿ ಯುವ ಸಂಸತ್ ನಡೆಯಲಿದೆ. ಇದರಲ್ಲಿ ಆಯ್ಕೆಯಾಗುವ ಇಬ್ಬರನ್ನು ರಾಷ್ಟ್ರಮಟ್ಟದ ಯುವ ಸಂಸತ್ ಕಾರ್ಯಕ್ರಮಕ್ಕೆ ಪರಿಗಣಿಸಲಾಗುವುದು.

ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಲಾಗುವುದು ಎಂದು ತಿಳಿಸಿದರು.

ಸಮಾರೋಪ ಸಮಾರಂಭದ ಸಾನ್ನಿಧ್ಯವನ್ನು ಮುಪ್ಪಿನ ಬಸವಲಿಂಗ ಸ್ವಾಮೀಜಿ ವಹಿಸುವರು. ವಿ.ಪ ಸಭಾಪತಿ ಬಸವರಾಜ ಹೊರಟ್ಟಿ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಉಪಸ್ಥಿತರಿರುವರು. ಕಾನೂನು ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲೆಯ ಜನಪ್ರತಿನಿಧಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅನ್ನದಾನೇಶ್ವರ ಪ.ಪೂ ಮಹಾವಿದ್ಯಾಲಯದ ಪ್ರಾಚಾರ್ಯ ವೈ.ಸಿ. ಪಾಟೀಲ, ಎಸ್.ಎಸ್. ಸೋಮಣ್ಣವರ, ಎನ್.ಸಿ. ಕಟ್ಟಿಮನಿ, ಎಸ್. ವೈ. ಮೇಟಿ, ಗಿರಿತಮ್ಮಣ್ಣವರ, ರಾಜೇಶ್ವರಿ ಸಂಶಿ ಮುಂತಾದವರು ಉಪಸ್ಥಿತರಿದ್ದರು.

## ಸಂಪಾದಕೀಯ

### ಜಾತಿ ಜನಗಣತಿ ಸುತ್ತ-ಮುತ್ತ

ರಾಜ್ಯದಲ್ಲಿ ಮಾತ್ರವಲ್ಲ ಇಡೀ ದೇಶಾದ್ಯಂತ ಈಗ ಜಾತಿವಾರು ಜನಗಣತಿಯದ್ದೆ ದೊಡ್ಡ ಚರ್ಚೆ. ಅದರಲ್ಲೂ ಪಂಚ ರಾಜ್ಯ ಚುನಾವಣೆ ಎದುರಾಗಿರುವುದರಿಂದ, ಕಾಂಗ್ರೆಸ್ ಜಾತಿವಾರು ಜನಗಣತಿಯನ್ನ ಮತ ಸೆಳೆಯುವ ಅಸ್ತ್ರವಾಗಿ ಬಳಕೆ ಮಾಡಿಕೊಳ್ಳುತ್ತಿದೆ.

ಇದಕ್ಕೆ ಪ್ರಬಲವಾದ ರಾಜಕೀಯ ಕಾರಣವೂ ಇದೆ. ಮುಖ್ಯವಾಗಿ ಪ್ರಬಲ ಜಾತಿಗಳ ಜನಸಂಖ್ಯೆಗಿಂತ ಹಿಂದುಳಿದ ವರ್ಗಗಳ ಜನಸಂಖ್ಯೆ ಅಧಿಕವಾಗಿದೆ. ಒಂದೊಮ್ಮೆ ಜನಸಂಖ್ಯೆ ಆಧಾರಿತ ಮೀಸಲಾತಿ ಅಥವಾ ಕಾರ್ಯಕ್ರಮಗಳು ಘೋಷಣೆಯಾದರೆ, ಸಣ್ಣ ಸಣ್ಣ ಜಾತಿಯ ದೊಡ್ಡ ದೊಡ್ಡ ನಾಯಕರಿಗೆ ಭಾರೀ ಪೆಟ್ಟು ಬೀಳಲಿದೆ.

ಈ ಕಾರಣಕ್ಕಾಗಿ ಅನೇಕ ಪ್ರಬಲ ಸಮುದಾಯಗಳ ನಾಯಕರು ಕಾಂತರಾಜು ವರದಿ ಜಾರಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅದರಲ್ಲೂ ಆಡಳಿತರೂಢ ಕಾಂಗ್ರೆಸ್ ಪಕ್ಷದ ಕೆಲ ನಾಯಕರು ಸಹ ಜಾತಿವಾರು ಜನಗಣತಿಯ ವರದಿ ಮಂಡನೆಗೆ ಅಸಹಕಾರ ತೋರುತ್ತಿದ್ದಾರೆ.

ಆದರೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜಾತಿವಾರು ಜನಗಣತಿ ಮಾಡುವ ಭರವಸೆ ನೀಡುತ್ತಿದ್ದಾರೆ, ಯಾವ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇದಿಯೋ ಅಲ್ಲಿ ಜಾತಿವಾರು ಜನಗಣತಿಯನ್ನ ಮಾಡುವಂತೆ ಅಥವಾ ಮಾಡಿದ್ದರೆ ಬಿಡುಗಡೆ ಮಾಡುವಂತೆ ಸೂಚನೆ ಕೊಟ್ಟಾಗಿದೆ.

ಆ ಕಾರಣಕ್ಕಾಗಿ ಕಾಂತರಾಜು ಆಯೋಗದ ವರದಿ ಕೆಲವೇ ದಿನಗಳಲ್ಲಿ ಬಹಿರಂಗಗೊಳ್ಳುವ ನಿರೀಕ್ಷೆ ಮೂಡಿಸಿದೆ. ಕೆಲ ಕಾಂಗ್ರೆಸ್ ನಾಯಕರಿಗೆ ಹೈಕಮಾಂಡಿನ ಈ ನಿರ್ಧಾರ ಸರಿ ಕಾಣದಿದ್ದರೂ ಪಕ್ಷದ ಸೂಚನೆಯನ್ನು ಪಾಲಿಸಬೇಕಾದ ಒತ್ತಡದಲ್ಲಿದ್ದಾರೆ.

ಇನ್ನೊಂದೆಡೆ ಬಿಜೆಪಿಯ ಹೊಸ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಸಹ ಜಾತಿವಾರು ಜನಗಣತಿಯ ವರದಿ ಬಿಡುಗಡೆಗೆ ಯಾವುದೇ ವಿರೋಧವಿಲ್ಲ ಎನ್ನುವ ಮೂಲಕ ರಕ್ಷಣಾತ್ಮಕ ರಾಜಕಾರಣದ ದಾಳವನ್ನು ಉರಳಿಸಿದ್ದಾರೆ. ಮತ್ತೊಂದೆಡೆ ಕಾಂತರಾಜು ಆಯೋಗದ ವರದಿಯ ಮೂಲ ಪ್ರತಿ ಕಳವಾಗಿರುವುದು, ಜಯಪ್ರಕಾಶ್ ಹೆಗಡೆ ಅವರ ಅಧಿಕಾರ ಅವಧಿಯನ್ನು ವಿಸ್ತರಿಸಿರುವುದು, ಜಾತಿವಾರು ಜನಗಣತಿ ವರದಿಯ ಮಹತ್ವವನ್ನು ಸಾರುತ್ತಿದೆ.

ಜಾತಿವಾರು ಜನಗಣತಿ ನಡೆಸಲು ನೂರಾರು ಕೋಟಿ ರೂಪಾಯಿ ವ್ಯಯವಾಗಿದೆ. ಆದರೂ ಜಾತಿವಾರು ಜನಗಣತಿ ವೈಜ್ಞಾನಿಕವಾಗಿ ನಡೆದಿಲ್ಲ ಎಂದು ಉಪಮುಖ್ಯಮಂತ್ರಿಯ ಡಿ.ಕೆ. ಶಿವಕುಮಾರ್ ಪರೋಕ್ಷವಾಗಿ ಹೇಳುತ್ತಿದ್ದಾರೆ.

ಸದ್ಯ ಕಾಂತರಾಜು ಆಯೋಗ ಸಲ್ಲಿಸಿರುವ ವರದಿಯನ್ನು ಯಥಾವತ್ತಾಗಿ ಜನರ ಮುಂದಿಡುವ ಕೆಲಸವನ್ನು ಸರ್ಕಾರ ಮಾಡಬೇಕು. ವರದಿ ಬಹಿರಂಗಗೊಂಡ ನಂತರವೇ ಅದು ವೈಜ್ಞಾನಿಕವಾಗಿ ಇದೆಯೋ ಎಲ್ಲವೋ ಎನ್ನುವ ಬಗ್ಗೆ ಪರಾಮರ್ಶೆ ನಡೆಯಲಿ ಎನ್ನುವುದು ಜನರ ಆಶಯ.

### ಸೊಳ್ಳೆಗಳಿಂದ ಹರಡಬಹುದಾದ ಮಾರಣಾಂತಿಕ ಖಾಯಿಲೆಯ ಬಗ್ಗೆ ಎಚ್ಚರವಿರಲಿ

# ಡೆಂಗ್ಯೂ ಜ್ವರ ನಿಯಂತ್ರಣ, ಚಿಕಿತ್ಸೆಯ ಮಾಹಿತಿ

ಡೆಂಗ್ಯೂ ಏಡಿಸ್ ಈಜಿಪ್ಟಿ ಎಂಬ ಸೊಳ್ಳೆಯು ಹಗಲು ಹೊತ್ತಿನಲ್ಲಿ ಕಚ್ಚುವುದರಿಂದ ಡೆಂಗ್ಯೂ ವೈರಸ್ ದೇಹವನ್ನು ಸೇರಿ ಡೆಂಗ್ಯೂ ಜ್ವರ ಬರುತ್ತದೆ. ಡೆಂಗ್ಯೂ ಸೊಳ್ಳೆ ಹಗಲಿನಲ್ಲಿ ಕಚ್ಚಿದ ನಂತರ 3ರಿಂದ 7 ದಿನಗಳಲ್ಲಿ ತೀವ್ರ ಜ್ವರ ಬರುತ್ತದೆ.

ಡೆಂಗ್ಯೂ ಜ್ವರ ಲಕ್ಷಣಗಳು-ತೀವ್ರ ಜ್ವರದ ಜೊತೆಗೆ ಅತಿಯಾದ ತಲೆನೋವು, ಕಣ್ಣಿನ ಹಿಂಭಾಗದಲ್ಲಿ ವಿಪರೀತ ನೋವು ಮತ್ತು ಭಾರ ಎನಿಸುವುದು, ದೇಹದ ಮಾಂಸ ಪೇಶಿಗಳು ಮತ್ತು ಸಂಧಿಗಳಲ್ಲಿ ತೀವ್ರ ನೋವು, ವಿಪರೀತ ಸುಸ್ತು ಮತ್ತು ವಾಂತಿ, ದೇಹದ ಚರ್ಮದ ಮೇಲೆ ಕೆಂಪು ವರ್ಣದ ಬೊಬ್ಬೆಗಳು ಕಾಣಿಸುವುದು, ಒಸಡು, ಬಾಯಿ, ಮೂಗು ಹಾಗೂ ಇತರ ಭಾಗಗಳಿಂದ ರಕ್ತಸ್ರಾವ ಆಗಬಹುದು.

ಡೆಂಗ್ಯೂ ಜ್ವರ ಲಕ್ಷಣ ಕಂಡುಬಂದಲ್ಲಿ ತಕ್ಷಣವೇ ಹತ್ತಿರದ ಸರ್ಕಾರಿ ಆಸ್ಪತ್ರೆ ವೈದ್ಯರನ್ನು ಭೇಟಿ ಮಾಡುವುದು ಅಗತ್ಯ. ವೈದ್ಯರ ಸಲಹೆ ಮೇರೆಗೆ ಕೂಡಲೇ ರಕ್ತ ಪರೀಕ್ಷೆ ಮಾಡಿಸುವುದು. ರಕ್ತ ಪರೀಕ್ಷೆಯಲ್ಲಿ ರಕ್ತ ಧಾತುಕಣಗಳ ಸಂಖ್ಯೆ ಗಣನೀಯ ಕುಸಿತವಾಗಿರುತ್ತದೆ. ಅಂದರೆ ಆರೋಗ್ಯವಂತ ವ್ಯಕ್ತಿಯಲ್ಲಿ 2.5 ಲಕ್ಷಕ್ಕಿಂತ ಅಧಿಕವಿರುವ ಪ್ಲೇಟ್‌ಲೆಟ್ ಸಂಖ್ಯೆ 1 ಲಕ್ಷಕ್ಕಿಂತಲೂ ಕಡಿಮೆಯಾಗಿರುತ್ತದೆ.

ಡೆಂಗ್ಯೂ ಜ್ವರ ಬಾರದಂತೆ ಸೊಳ್ಳೆಗಳ ನಿಯಂತ್ರಣವೇ ಮುಖ್ಯವಾದ ಮುಂಜಾಗ್ರತಾ ಕ್ರಮವಾಗಿದೆ. ಮನೆಯಲ್ಲಿ ಸೊಳ್ಳೆ ನಿರೋಧಕ ಆಯುಷ್ ಧೂಪಗಳನ್ನು ಉಪಯೋಗಿಸಬೇಕು. ಬೇವಿನ ಸೊಪ್ಪಿನ ಹೊಗೆ ಮತ್ತು ಲೊಬಾನದ ಹೊಗೆ ಹಾಕುವುದು,

ಕರ್ಪೂರಗಳನ್ನು ನೀರಿನಲ್ಲಿ ಹಾಕಿ ಮನೆಯಲ್ಲಿ ಅಲ್ಲಲ್ಲಿ ಇಡುವುದು, ಬೇವಿನ ಎಣ್ಣೆಯನ್ನು ಸೊಳ್ಳೆ ನಿಯಂತ್ರಣ ಯಂತ್ರದಲ್ಲಿ ಹಾಕಿ ಉಪಯೋಗಿಸುವುದು, ಕರ್ಪೂರದ ತೈಲವನ್ನು ಸೊಳ್ಳೆ ನಿಯಂತ್ರಣ ಯಂತ್ರದಲ್ಲಿ ಹಾಕಿ ಉಪಯೋಗಿಸುವುದು, ಮನೆಯ ಕಿಟಕಿ ಬಾಗಿಲುಗಳಿಗೆ ಮೆಷ್ (ಜಾಲರಿ) ಅಳವಡಿಸುವುದು, ಸೊಳ್ಳೆ ಪರದೆಗಳನ್ನು ಉಪಯೋಗಿಸುವುದು, ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸುವುದು, ಮನೆಯಲ್ಲಿ ನೀರು ಶೇಖರಿಸಿದ ತೊಟ್ಟಿ, ಡ್ರಮ್ ಇತ್ಯಾದಿಗಳನ್ನು ಮುಚ್ಚಿಡುವುದು, ನೀರು ಸಂಗ್ರಹಿಸಿದ ತೊಟ್ಟಿಗಳನ್ನು ಆಗಾಗ ಶುಚಿಗೊಳಿಸುವುದು ಇತ್ಯಾದಿಗಳಿಂದ ಡೆಂಗ್ಯೂ ಬಾರದಂತೆ ತಡೆಗಟ್ಟಬಹುದು.



ವೈದ್ಯಕೀಯ ಚಿಕಿತ್ಸೆ ಜೊತೆಗೆ ಪ್ಲೇಟ್‌ಲೆಟ್ ಸಂಖ್ಯೆ ವೃದ್ಧಿಗೋಸ್ಕರ ಪೂರಕ ಚಿಕಿತ್ಸಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಪಪ್ಪಾಯಿ ಎಲೆಗಳ ಹಾಗೂ ಹಣ್ಣಿನ ರಸ ದಿನಕ್ಕೆ ಮೂರು ಬಾರಿ, ಅಮೃತ ಬಳ್ಳಿ ಕಾಂಡದ ಕಷಾಯ ಸೇವನೆ ದಿನಕ್ಕೆ ಮೂರು ಬಾರಿ, ಈರುಳ್ಳಿ ರಸ (1 ಚಮಚ) ಬೆಲ್ಲದೊಂದಿಗೆ ದಿನಕ್ಕೆ ಮೂರು ಬಾರಿ ಸೇವಿಸುವುದು.

ಶುಂಠಿ, ತುಳಸಿ, ಕರಿಮೆಣಸು, ಲವಂಗ, ಏಲಕ್ಕಿ, ಅರಿಷಿಣಪುಡಿ, ಧನಿಯಾ, ಜೀರಿಗೆ, ಬೆಲ್ಲ, ಹಾಲು ಇವುಗಳ ಮಿಶ್ರಣವನ್ನು ಕುದಿಸಿ ತಯಾರಿಸಿದ ಕಷಾಯ ದಿನಕ್ಕೆ 1 ಗ್ಲಾಸ್‌ನಂತೆ ಮೂರು ಬಾರಿ ಸೇವಿಸುವುದು. ಇದರಿಂದ ಡೆಂಗ್ಯೂ ಜ್ವರದ ತೀವ್ರ ತಲೆನೋವು, ಸಂಧಿನೋವು ನಿವಾರಣೆಯಾಗುತ್ತದೆ. ನಿರ್ಜಲೀಕರಣದ ಅಪಾಯ ತಡೆಯಲು ಸಾಕಷ್ಟು ಎಳನೀರು, ಕಬ್ಬಿನ ರಸ, ನಿಂಬೆಹಣ್ಣಿನ ಶರಬತ್ತು ಸೇವನೆ, ಕರಿದ್ರಾಕ್ಷಿ ರಸ, ಕಿತ್ತಳೆ ರಸ, ಪಪ್ಪಾಯ ಹಣ್ಣಿನ ರಸದ ಸೇವನೆ ಮಾಡಬೇಕು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆದೇಶದಂತೆ ಆಯುಷ್ ಇಲಾಖೆಯ ತಜ್ಞರ ಸಮಿತಿಯು ಈ ಔಷಧಗಳ ಪ್ರಯೋಗವನ್ನು ಶಿಫಾರಸ್ಸು ಮಾಡಿದೆ.

ಇದರಿಂದ ಕರೋನಾ ಹಾಗೂ ನೆಗಡಿಯಂತಹ ರೋಗಗಳು ಬರದಂತೆ ತಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಸಮೀಪದ ಸರಕಾರಿ ಆಯುರ್ವೇದ, ಹೋಮಿಯೋಪತಿ ಚಿಕಿತ್ಸಾಲಯ ಅಥವಾ ಆಸ್ಪತ್ರೆಯನ್ನು ಸಂಪರ್ಕಿಸಬಹುದಾಗಿದೆ.

**- ಮಾಲಾ ಕರ್ಜಗಿ.**

**ಅಪ್ರೆಂಟಿಸ್, ವಾರ್ತಾ ಮತ್ತು ಪ್ರಚಾರ ಇಲಾಖೆ-ಗದಗ.**

#### ಸಾಮಾನ್ಯ ಖಾಯಿಲೆಗಳಿಗೆ ರಾಮಬಾಣ

ಜ್ವರಕ್ಕೆ ಜೇನುತುಪ್ಪದೊಂದಿಗೆ ಅಮೃತ ಬಳ್ಳಿ ಕಾಂಡದ ಕಷಾಯ. ಕೆಮ್ಮು ನಿವಾರಣೆಗೆ ಹಸಿ ಶುಂಠಿ ರಸ-10 ಎಂ.ಎಲ್, ಜೇನುತುಪ್ಪ 10 ಎಂ.ಎಲ್ ಬೆರೆಸಿಕೊಂಡು ದಿನಕ್ಕೆ 2-3 ಬಾರಿ ಸೇವಿಸುವುದು. ನೆಗಡಿಗೆ ಅರಿಶಿನ ಕೊಂಬಿನ ಧೂಮವನ್ನು ಮೂಗಿನಿಂದ ಸೇವಿಸಿ ಬಾಯಿಯಿಂದ ಬಿಡುವುದು, ಕರ್ಪೂರ, ಪುದಿನ ಹಾಗೂ ಓಂ ಕಾಳಿನ ಸತ್ವಗಳನ್ನು 1:2:1 ಪ್ರಮಾಣದಲ್ಲಿ ಬೆರೆಸಿ 2-3 ಹನಿಗಳನ್ನು ಬಿಸಿ ನೀರಿನಲ್ಲಿ ಹಾಕಿ.

ಶ್ವಾಸ: ವಾಸಾಪತ್ರದ ಸ್ವರಸ, ಜೇನುತುಪ್ಪದ ಜೊತೆಗೆ ಸೇವಿಸುವುದು. ಹೊಟ್ಟೆ ನೋವು: ಓಂಕಾಳು, ಜೀರಿಗೆ ಕಷಾಯ ಸೇವಿಸುವುದು. ಗ್ಯಾಸ್ಟ್ರಿಕ್ (ಹೊಟ್ಟೆ ಉರಿ): ದನಿಯಾ 2 ಚಮಚ ಒಂದು ಲೋಟ ಕುದಿಯುವ ನೀರಿಗೆ ಹಾಕಿ ರಾತ್ರಿಯಿಡೀ ನೆನೆಸಿ ಬೆಳಗ್ಗೆ ಸೇವಿಸುವುದು.

ಮಲಬದ್ಧತೆ: ಪುದಿನ ಎಲೆ 10 ಗ್ರಾಂ, ಒಣ ಶುಂಠಿ 10 ಗ್ರಾಂ, ಸೋಂಪು 10 ಗ್ರಾಂ, ಉಪ್ಪು 10 ಗ್ರಾಂ, ಇದೆಲ್ಲದರ ಪುಡಿ0ಯನ್ನು 50 ಎಂ.ಎಲ್ ಬಿಸಿ ನೀರಿನಲ್ಲಿ ಬೆರೆಸಿ ರಾತ್ರಿ ಸೇವಿಸಬೇಕು.

ಅತಿಸಾರ: ದಾಳಿಂಬೆ ಸಿಪ್ಪೆಯಿಂದ ತಯಾರಿಸಿದ ಕಷಾಯ ಸೇವಿಸುವುದು.

ವಾಂತಿ: ಓಂಕಾಳು, ಕಲ್ಲುಸಕ್ಕರೆ ಮತ್ತು ಏಲಕ್ಕಿ ಚೀಪುವುದು.

ಕೀಲು ನೋವು: ಹರಳೆಣ್ಣೆ, ಒಂದು ಚಿಟಿಕೆ ಸೈಂದವ ಲವಣ ಬಿಸಿಮಾಡಿ ನೋವಿನ ಜಾಗದಲ್ಲಿ ಹಚ್ಚುವುದು.



ಲಕ್ಷ್ಮೇಶ್ವರ ತಾಲೂಕಿನ ಶಿಗ್ಲಿಯ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಮಕ್ಕಳ ದಿನಾಚರಣೆಯ ಪ್ರಯುಕ್ತ ವಿದ್ಯಾರ್ಥಿಗಳಿಗಾಗಿ ರಂಗೋಲಿ ಸ್ಪರ್ಧೆ, ಸೃಜನಾತ್ಮಕ ಕ್ರೀಡೆಗಳನ್ನು ಏರ್ಪಡಿಸಲಾಗಿತ್ತು. ರಂಗೋಲಿ ಸ್ಪರ್ಧೆಯಲ್ಲಿ ರೇಣುಕಾ ಅಣ್ಣಿಗೇರಿ ಪ್ರಥಮ, ಬಸಮ್ಮ ಅಡ್ರಕಟ್ಟಿ ದ್ವಿತೀಯ, ನಿವೇದಿತಾ ಕಂಬಳಿ ಹಾಗೂ ಸಾನಿಯಾ ಸುಂಕದ ತೃತೀಯ ಸ್ಥಾನ ಪಡೆದರು. ಬಹುಮಾನ ವಿತರಣಾ ಸಮಾರಂಭದಲ್ಲಿ ಶಿಕ್ಷಕರಾದ ಆರ್.ಡಿ. ಕಲಾಯಗಾರ, ಆರ್.ಡಿ. ಕಪತ್ತನವರ, ಎಸ್.ಬಿ. ಅಣ್ಣಿಗೇರಿ, ತಿಪ್ಪಾನಾಯ್ಕ, ದೀಪ ಭೋಸ್ಮೆ, ಎಂ.ಎಂ. ಸುಂಕದ ಇದ್ದರು.

# ಲೋಕಾಯುಕ್ತರಿಂದ 15 ದೂರುಗಳು ಸ್ವೀಕೃತ

**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿಯ ತಹಸೀಲ್ದಾರ ಕಚೇರಿಯಲ್ಲಿ ಗದಗ ಲೋಕಾಯುಕ್ತ ಡಿಎಸ್‌ಪಿ ವಿಜಯ ಬಿರಾದಾರ ನೇತೃತ್ವದಲ್ಲಿ ಮಂಗಳವಾರ ಜರುಗಿದ ಸಾರ್ವಜನಿಕ ದೂರು ಸ್ವೀಕಾರ ಕಾರ್ಯಕ್ರಮದಲ್ಲಿ ಒಟ್ಟೂ 15 ದೂರುಗಳು ಸ್ವೀಕೃತಗೊಂಡವು.

ಈ ಸಂದರ್ಭದಲ್ಲಿ ಮಾತನಾಡಿದ ಲೋಕಾಯುಕ್ತ ಡಿಎಸ್‌ಪಿ ವಿಜಯ ಬಿರಾದಾರ, ಕಾರ್ಯಕ್ರಮದಲ್ಲಿ 15 ದೂರುಗಳು ಬಂದಿದ್ದು, ಇದರಲ್ಲಿ ಎಡಿಎಲ್‌ಆರ್ ಮತ್ತು ಪಟ್ಟಣ ಪಂಚಾಯಿತಿಗೆ ಸಂಬಂಧಿಸಿದ ದೂರುಗಳು ಹೆಚ್ಚಿವೆ. ಇವೆಲ್ಲವುಗಳನ್ನು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ವಿಲೇವಾರಿ ಮಾಡಿ, ದೂರುದಾರರಿಗೆ 1 ವಾರದಲ್ಲಿ ಉತ್ತರ ನೀಡುವಂತೆ ಸೂಚಿಸಲಾಗಿದೆ.

ಮುಂಬರುವ ದಿನಗಳಲ್ಲಿ ಸಾರ್ವಜನಿಕರು ಅಧಿಕಾರಿಗಳಿಂದ ತಮ್ಮ ಕೆಲಸಗಳಲ್ಲಿ ವಿಳಂಬವಾದ ಸಂದರ್ಭದಲ್ಲಿ ಇಂತಹ ಕಾರ್ಯಕ್ರಮದಲ್ಲಿ ಭಾಗಿಯಾಗಿ ದೂರುಗಳನ್ನು ನೀಡಬಹುದಾಗಿದೆ ಎಂದರು.

ತರುವಾಯ, ಸ್ಥಳೀಯ ಹೆಸ್ಕಾಂ ಕಚೇರಿಗೆ ತೆರಳಿ ಪರಿಶೀಲನೆ ನಡೆಸಿ, ಭ್ರಷ್ಟಾಚಾರ ತಡೆಗೆ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸುವುದಕ್ಕಾಗಿ ಬ್ಯಾನರ್ ಅಳವಡಿಸಿದರು. ಎಲ್ಲ ಇಲಾಖಾ ಕಚೇರಿಗಳಲ್ಲಿಯೂ ಸಹ ಈ ಬ್ಯಾನರ್ ಪ್ರದರ್ಶಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ತಹಸೀಲ್ದಾರ ಅನಿಲ ಬಡಿಗೇರ ಮತ್ತು ತಾಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



# ‘ಸಹಕಾರ ರತ್ನ’ ಗುರಣ್ಣ ಬಳಗಾನೂರರಿಗೆ ಸನ್ಮಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಗ'ದ'ಗ'-ಬ'ಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ, ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷ ಮತ್ತು ದಿ. ಗದಗ-ಬೆಟಗೇರಿ ಸೆಂಟ್ರಲ್ ಕೋ-ಆಪ್ ಹೋಲ್‌ಸೇಲ್ ಸ್ಟೋರ್ಸ್ ಲಿ. ಗದಗ ಇದರ ನಿರ್ದೇಶಕರಾದ ಗುರಣ್ಣ ಬಳಗಾನೂರ ಅವರಿಗೆ ರಾಜ್ಯ ಸರ್ಕಾರದ ವತಿಯಿಂದ ‘ಸಹಕಾರ ರತ್ನ’ ಪ್ರಶಸ್ತಿ ಲಭಿಸಿರುವುದಕ್ಕೆ ದಿ. ಗದಗ-ಬೆಟಗೇರಿ ಸೆಂಟ್ರಲ್ ಕೋ-ಆಪ್ ಹೋಲ್‌ಸೇಲ್ ಸ್ಟೋರ್ಸ್ ಲಿ. (ಜನತಾ ಬಜಾರ್) ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.


ಸಂಸ್ಥೆಯ ಅಧ್ಯಕ್ಷ ಶಿವಾನಂದ ಮಾದಣ್ಣವರ, ಹಿರಿಯ ನಿರ್ದೇಶಕರಾದ ಸಿ.ಆರ್. ಮರಿಯಪ್ಪಗೌಡ, ಗಿರಿಧರಸಿಂಗ್ ಎಸ್.ಬ್ಯಾಳಿ, ಉಪಾಧ್ಯಕ್ಷೆ ಮೀನಾಕ್ಷಿ ಬೆನಕಣ್ಣವರ, ಪ್ರಭು ಎಲ್.ಬುರಬುರೆ, ಸುಜಾತಾ ಎನ್.ದೊಡ್ಡಮನಿ, ಆಷ್ಪಾಕ್ ಅಹ್ಮದ ಮಿಶ್ರಿಕೋಟಿ, ಬಾಲಚಂದ್ರ ಭರಮಗೌಡ್ರ, ಸಂಸ್ಥೆಯ ಮ್ಯಾನೇಜರ್ ಜೂನಸಾಬ ಮಂಗಳೂರ, ಗದಗ ಜಿಲ್ಲಾ ಅಲ್ಪಸಂಖ್ಯಾತ ಕಾಂಗ್ರೆಸ್ ಅಧ್ಯಕ್ಷ ಫಾರೂಕ್ ಹುಬ್ಬಳ್ಳಿ, ಅನ್ವರ ಶಿರಹಟ್ಟಿ, ಮಹಮ್ಮದ ಶಾಲಗಾರ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



## ಚಂದನ ವಾಹಿನಿಯಲ್ಲಿ ತೆಲ್ಲೂರರ ಸಂದರ್ಶನ ನಾಳೆ

**■ವಿಜಯಸಾಕ್ಷಿ ಸುದ್ದಿ, ಗದಗ**

‘ಚಂದನ’ ದೂರದರ್ಶನ ವಾಹಿನಿಯಲ್ಲಿ ನ. 24ರಂದು ಮುಂಜಾನೆ 8ರಿಂದ 9 ಗಂಟೆಯವರೆಗೆ ನೇರ ಪ್ರಸಾರವಾಗಲಿರುವ ‘ಶುಭೋದಯ ಕರ್ನಾಟಕ’ ಮಾಲಿಕೆಯಲ್ಲಿ ನಾಡಿನ ಹಿರಿಯ ಕಲಾವಿದರಾದ ಗದುಗಿನ ಪಂ. ಸಿದ್ಧೇಶ್ವರ ಶಾಸ್ತ್ರೀಗಳು ತೆಲ್ಲೂರ ಅವರ ಪರಿಚಯ, ಸಾಧನೆ ಪ್ರಸಾರಗೊಳ್ಳಲಿದೆ.



ಡಾ. ಪಂ.ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ ತೆಲ್ಲೂರ ಅವರು ಆಕಾಶವಾಣಿಯ ಬಿ ಹೈ-ಗ್ರೇಡ್ ಕಲಾವಿದರಾಗಿದ್ದು, ಸಂಗೀತ, ಸಾಹಿತ್ಯ, ಪುರಾಣ ಪ್ರವಚನ, ಕೀರ್ತನ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ.

ಧ್ವನಿ ಸುರಳಿ, ಗ್ರಂಥಗಳನ್ನು ಬಿಡುಗಡೆ ಮಾಡಿರುವ ಇವರಿಗೆ ಹಲವಾರು ಪ್ರಶಸ್ತಿಗಳು ಲಭಿಸಿದ್ದು ನಾಡಿನ ಮಠ-ಮಂದಿರಗಳು, ಸಂಘ-ಸಂಸ್ಥೆಗಳು ಇವರ ಸಾಧನೆಗಾಗಿ ಗೌರವಿಸಿವೆ.

## ಶೌಚಾಲಯದ ನಿರ್ವಹಣೆಗೆ ಸ್ಥಳೀಯರನ್ನು ನೇಮಿಸಿ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಶ್ರೀ ಪಂ.ಪುಟ್ಟರಾಜ್(ಹಳೆಯ) ಬಸ್ ನಿಲ್ದಾಣದಲ್ಲಿರುವ ಶೌಚಾಲಯದ ನಿರ್ವಹಣೆಯನ್ನು ಕನ್ನಡ ಭಾಷೆ ತಿಳಿಯದವರಿಗೆ ನೀಡಿದ್ದು, ಇದನ್ನು ರದ್ದುಪಡಿಸುವಂತೆ ಕರ್ನಾಟಕ ಪ್ರಜಾಪರ ವೇದಿಕೆಯ ಗದಗ ಜಿಲ್ಲಾಧ್ಯಕ್ಷ ರಫೀಕ ಧಾರವಾಡ ಗದಗ ಜಿಲ್ಲಾ ಸಾರಿಗೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.



ಕರ್ನಾಟಕದಲ್ಲಿ ಗದಗ ನಗರಕ್ಕೆ ತನ್ನದೇ ಆದ ಪಾರಂಪರಿಕ ಇತಿಹಾಸವಿದೆ. ಕನ್ನಡ ಭಾಷೆ ಬಾರದಿರುವ ಹೊರರಾಜ್ಯದವರಿಗೆ ಶೌಚಾಲಯದ ಗುತ್ತಿಗೆ ನೀಡಿರುವುದು ಹಲವು ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಕಾರಣ, ಈ ಶೌಚಾಲಯದ ನಿರ್ವಹಣೆಗೆ ಸ್ಥಳೀಯರನ್ನು ನೇಮಕ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

### ಶಿಗ್ಲಿಯ ಡಾ.ಶಂಭು ಬಳಿಗಾರ, ಶಂಕರ ರಾಗಿ ಅವರಿಗೆ ತವರೂರಿನಲ್ಲಿ ಆತ್ಮೀಯ ಸನ್ಮಾನ

# ಜಾನಪದ ಸಾಹಿತ್ಯದ ವ್ಯಾಪ್ತಿ ವಿಶಾಲವಾಗಿದೆ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ನಾನಿಂದು ಈ ಮಟ್ಟಕ್ಕೆ ಬೆಳೆದು ನಿಲ್ಲಲು ನಮ್ಮ ಊರಿನ ಸಂಸ್ಕೃತಿ ಮತ್ತು ಹಿರಿಯರು ನೀಡಿದ ಸಂಸ್ಕಾರವೇ ಕಾರಣ. ಯಾವುದೇ ವ್ಯಕ್ತಿ ಸಾಧನೆ ಮಾಡಬೇಕಾದರೆ ಅವರಿಗೆ ಮನೆಯಲ್ಲಿ ಉತ್ತಮ ಸಂಸ್ಕಾರ ನೀಡಬೇಕು. ಅಂತಹ ಉತ್ತಮ ಸಂಸ್ಕಾರ, ಸಂಸ್ಕೃತಿಯನ್ನು ಹೊಂದಿರುವ ಶಿಗ್ಲಿ ನನ್ನ ತವರೂರು ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ ಎಂದು ಜಾನಪದ ಸಾಹಿತಿ, 2022-23ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಶಂಭು ಬಳಿಗಾರ ನುಡಿದರು.

ಮಂಗಳವಾರ ಶಿಗ್ಲಿ ಗ್ರಾಮದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಇನ್ನೊರ್ವ ಸನ್ಮಾನಿತ ಶಂಕರ ರಾಗಿ ಮಾತನಾಡಿ, ಮಕ್ಕಳಿಗೆ ಚಿಕ್ಕಂದಿನಿಂದಲೇ ಶಿಸ್ತು, ಪ್ರಾಮಾಣಿಕತೆ, ಪರಿಶ್ರಮದ ಬಗ್ಗೆ ಸರಿಯಾಗಿ ತಿಳುವಳಿಕೆ ನೀಡಿ ಬೆಳೆಸಬೇಕು. ಉತ್ತಮ ಸಾಧನೆಗೆ ಹಿರಿಯರ ಆಶೀರ್ವಾದದ ಜೊತೆಗೆ ಸಂಸ್ಕಾರವೂ ಅವಶ್ಯ. ಗುಣಮಟ್ಟದ ಶಿಕ್ಷಣ ನೀಡುವದು ಶಿಗ್ಲಿ ಮಣ್ಣಿನ ಗುಣವಾಗಿದೆ. ಇಲ್ಲಿನ ಪರಿಸರದಲ್ಲಿ ವಿದ್ಯಾಭ್ಯಾಸ ಪಡೆದು ಇಂದು ಈ ಹಂತವನ್ನು ತಲುಪಿದ್ದೇನೆ. ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಿಸುವ ಜವಾಬ್ದಾರಿಯನ್ನು ಎಲ್ಲರೂ ನಿಭಾಯಿಸಬೇಕೆಂದು ಸಲಹೆ ನೀಡಿದರು.

ಸಭೆಯ ಸಾನ್ನಿಧ್ಯವನ್ನು ಹೂವಿನಶಿಗ್ಲಿ ವಿರಕ್ತಮಠದ ಶ್ರೀ ಚನ್ನವೀರ ಮಹಾಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು. ವಿ.ಪ ಸದಸ್ಯ ಪ್ರೊ. ಎಸ್.ವ್ಹಿ. ಸಂಕನೂರ, ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ, ಗ್ರಾ.ಪಂ ಅಧ್ಯಕ್ಷ ಅಶೋಕಯ್ಯ ಮುಳಗುಂದಮಠ, ಡಿ.ವೈ ಹುನಗುಂದ, ಬಸಣ್ಣ ಕಳಸದ, ಕೃಷ್ಣ ಬಿದರಳ್ಳಿ, ಶಿವು ಅಡರಕಟ್ಟಿ, ಗೋಕಾವಿ, ಈರಣ್ಣ ಅಕ್ಕೂರ, ಮುತ್ತು ಎಲಿಗಾರ, ಮಂಜು ಸೂರಣಗಿ, ಗೂಡೂರ, ಸೋಮು ಬಸರಿ, ಕೇಶವ ಗುಲಗಂಜಿ ಸೇರಿದಂತೆ ಅನೇಕರಿದ್ದರು.



ಜಾನಪದ ಸಾಹಿತ್ಯ ಬಹು ವಿಶಾಲವಾಗಿದೆ. ವೃತಿ ಬದುಕಿನ ಜೊತೆಗೆ ಜಾನಪದ ಸೇವೆ ಮಾಡುತ್ತಾ ಹೋಗಿದ್ದು ಎಲ್ಲರ ಆಶೀರ್ವಾದ ಹಾರೈಕೆಯ ಫಲವಾಗಿ ಇಂದು ಹೆಸರು ಮಾಡುವಂತಾಗಿದೆ.

ಕನ್ನಡ ನಾಡು-ನುಡಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಿರುವದು ನನ್ನ ತವರೂರಿಗೆ ಸಂದ ಕಾಣಿಕೆಯಾಗಿದೆ ಎಂದು ಡಾ.ಶಂಭು ಬಳಿಗಾರ ನುಡಿದರು.

**ನೀವೂ ನಮ್ಮ ಜೊತೆ ಕೈಜೋಡಿಸಿ**

**‘ವಿಜಯಸಾಕ್ಷಿ’**

**ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.**

**ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..**

**ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.**

**E-mail: vijayasakshidaily@gmail.com**

**ಮೊ : 9019256545**

# ಸದ್ಭಾವನಾ ಪಾದಯಾತ್ರೆ ಯಶಸ್ವಿಗೊಳಿಸಿ

▶▶ಮೊದಲನೇ ಪುಟದಿಂದ

ಜನತೆಯಲ್ಲಿ ಧರ್ಮ ಜಾಗೃತಿ, ಭಾರತೀಯ ಸಂಸ್ಕೃತಿ, ಸಂಸ್ಕಾರ ಸಂವರ್ಧನೆಗೊಳಿಸಲು, ಯುವಜನಾಂಗವನ್ನು ದುಶ್ಚಟಗಳಿಂದ ದೂರೀಕರಿಸಿ ಸದ್ಭಾವನೆ ಮೂಡಿಸುವ ಸದ್ಭಾವನಾ ಪಾದಯಾತ್ರೆಯು ನ. 25ರಿಂದ ನ. 28ರವರೆಗೆ ಗದಗ-ಬೆಟಗೇರಿ ಅವಳಿ ನಗರದಲ್ಲಿ ಹಾಗೂ ನ. 29ರಿಂದ ಡಿ.3ರವರೆಗೆ ಗ್ರಾಮೀಣ ಪ್ರದೇಶದಲ್ಲಿ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಸಂಘಟಕರಾದ ಚಂದ್ರು ಬಾಳಿಹಳ್ಳಿಮಠ ಮಾತನಾಡಿ, ಪ್ರವಚನ ಹಾಗೂ ಪಾದಯಾತ್ರೆ ಅಚ್ಚುಕಟ್ಟಾಗಿ ನಡೆಯಲು ಅಗತ್ಯ ಕ್ರಮ ಜರುಗಿಸಲಾಗಿದ್ದು ಭಕ್ತರ ಜನದಟ್ಟಣೆ, ವಾಹನ ದಟ್ಟಣೆ ನಿಯಂತ್ರಿಸಲು ಪೊಲೀಸ್ ಇಲಾಖೆ ಹಾಗೂ ಸ್ವಯಂ ಸೇವಕರ ಪಡೆ ಸನ್ನದ್ಧಗೊಂಡಿದೆ ಎಂದರು.

ಪ್ರವಚನ ನಡೆಯುವ ಸ್ಥಳಕ್ಕೆ ಕೆ.ಸಿ. ರಾಣಿ ರಸ್ತೆ, ಬೆಟಗೇರಿ, ಹಾತಲಗೇರಿ ನಾಕಾ ಮೂಲಕ ಆಗಮಿಸುವ ವಾಹನಗಳ ನಿಲುಗಡೆಗೆ ಚೇತನಾ ಕ್ಯಾಂಟೀನ್ ಬಳಿ ಇರುವ ಆ್ಯಂಗ್ಲೋ ಉರ್ದು ಹೈಸ್ಕೂಲ್ ಮೈದಾನ ಹಾಗೂ ಮಾಡೆಲ್ ಹೈಸ್ಕೂಲ್ ಮೈದಾನದಲ್ಲಿ ವ್ಯವಸ್ಥೆ ಮಾಡಲಾಗಿದೆ. ಹುಡ್ಕೋ, ಬಸ್‌ನಿಲ್ದಾಣ, ವೆಂಕಟೇಶ ಟಾಕೀಜ್, ಎಪಿಎಂಸಿ ಮಾರುಕಟ್ಟೆ ಮಾರ್ಗವಾಗಿ ಆಗಮಿಸುವ ವಾಹನಗಳ ನಿಲುಗಡೆಗೆ ಎಪಿಎಂಸಿ ಕಾರ್ಯಾಲಯದ ಬಳಿ, ಕೆ.ಎಚ್. ಪಾಟೀಲ ಸಭಾಂಗಣದ ಎದುರಿಗೆ ವ್ಯವಸ್ಥೆ ಮಾಡಲಾಗಿದೆ. ವಾಹನ ಮಾಲೀಕರು, ಚಾಲಕರು ಶಾಂತಿ-ಸುವ್ಯವಸ್ಥೆಯಿಂದ ಸಹಕರಿಸಬೇಕೆಂದು ಚಂದ್ರು ಬಾಳಿಹಳ್ಳಿಮಠ ವಿನಂತಿಸಿಕೊಂಡರು.

ಪತ್ರಿಕಾಗೋಷ್ಠಿಯಲ್ಲಿ ಚಂದ್ರು ಬಾಳಿಹಳ್ಳಿಮಠ, ಗುರಣ್ಣ ಬಳಗಾನೂರ, ಶೇಖಣ್ಣ ಗದ್ದಿಕೇರಿ, ಬಾಲಚಂದ್ರ ಭರಮಗೌಡ್ರ, ಧೀರಜ್ ಜೈನ್, ಮುರುಘರಾಜೇಂದ್ರ ಬಡ್ನಿ, ರಾಘವೇಂದ್ರ ಕಾಲವಾಡ, ಅಶೋಕ ಪಾಟೀಲ ಮುಂತಾದವರಿದ್ದರು.

### ವಿಶ್ವ ಪರಂಪರೆ ದಿನ, ಉಚಿತ ರಕ್ತ ಗುಂಪು ತಪಾಸಣಾ ಶಿಬಿರದಲ್ಲಿ ಆರ್.ಎಸ್. ಬುರಡಿ

# ಭಾರತೀಯ ಪರಂಪರೆ ಸಂವರ್ಧಿಸಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಇತಿಹಾಸ, ಕಲೆ ಮತ್ತು ಸಂಸ್ಕೃತಿಯ ಪರಂಪರೆಯು ರಾಷ್ಟ್ರದ ಹಿರಿಮೆಯನ್ನು ಸಂಕೇತಿಸುತ್ತದೆ. ಇಂತಹ ಭವ್ಯ ಪರಂಪರೆಯನ್ನು ಉಳಿಸಿ, ಸಂವರ್ಧಿಸುವ ಕೆಲಸ ನಮ್ಮೆಲ್ಲರಿಂದಲೂ ಆಗಬೇಕಿದೆ ಎಂದು ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ ಹೇಳಿದರು.

ಅವರು ಬುಧವಾರ ಗದಗ ರೋಟರಿ ಸೆಂಟ್ರಲ್ ಕ್ಲಬ್ ವತಿಯಿಂದ ಗದುಗಿನ ಗಂಗಿಮಡಿಯ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಿದ್ದ ವಿಶ್ವ ಪರಂಪರೆ ದಿನ ಹಾಗೂ ವಿದ್ಯಾರ್ಥಿಗಳಿಗೆ ಉಚಿತ ರಕ್ತ ಗುಂಪು ತಪಾಸಣಾ ಶಿಬಿರವನ್ನು ಶಾಲಾ ಆವರಣದಲ್ಲಿ ಸಸಿ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ಇತಿಹಾಸವನ್ನು ಅರಿತಿರಬೇಕು. ಇತಿಹಾಸ ತಿಳಿದವರು ಮಾತ್ರ ಇತಿಹಾಸ ನಿರ್ಮಿಸಲು ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳು ಭಾರತೀಯ ಸಂಸ್ಕೃತಿ, ಇತಿಹಾಸ, ಪರಂಪರೆಯನ್ನು ಅರಿತಿರಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಗದಗ ರೋಟರಿ ಸೆಂಟ್ರಲ್ ಕ್ಲಬ್ ಅಧ್ಯಕ್ಷ ವಿಜಯಕುಮಾರ




ಹಿರೇಮಠ ಮಾತನಾಡಿ, ಪ್ರತಿಯೊಬ್ಬ ವ್ಯಕ್ತಿ ತಮ್ಮ ರಕ್ತದ ಗುಂಪು ಯಾವುದು ಎಂಬುದನ್ನು ತಿಳಿಯುವದು ಅವಶ್ಯ. ಸಂದಿಗ್ಧ ಪರಿಸ್ಥಿತಿಯಲ್ಲಿ ಈ ರಕ್ತದ ಗುಂಪು ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯೆ ಆರ್.ಬಿ. ಸಂಕಣ್ಣವರ ವಹಿಸಿದ್ದರು. ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿ ಕೆ.ಎಸ್. ಬೇಲೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕ್ಲಬ್‌ನ ಖಜಾಂಚಿ ಸುನೀಲ್ ಕಬಾಡಿ, ಶಾಲೆಯ ಶಿಕ್ಷಕವೃಂದದವರಾದ ಡಿ.ಎಸ್. ಮಿಶೇನವರ, ಎಸ್.ಜಿ. ಗಿರಿತಮ್ಮನವರ, ವ್ಹಿ.ಆರ್. ಹಾಂಶಿ, ಸಿ.ಎಸ್. ಬೆಳಹಾರ, ಜೆ.ಡಿ. ಕಬ್ಬೇರಳ್ಳಿ, ಆರ್.ಡಿ. ಮಗಜಿ, ಆರ್.ಬಿ. ಹಾದಿಮನಿ, ಗೀತಾ ಕುಸಬಿ, ಸುನಿತಾ ರಾಮದುರ್ಗ, ದೀಪಾ ಮುಂಡೇವಾಡಿ, ಪಾಲಾಕ್ಷಮ್ಮ ದಿವಟೆ, ಮಂಜುಳಾ ವಡ್ಡಟ್ಟಿ ಮುಂತಾದವರಿದ್ದರು.

ರಕ್ತ ತಪಾಸಿಗ ಡಾ.ದತ್ತಾತ್ರೇಯ ವೈಕುಂಠೆ ಮಾತನಾಡಿ, ಎಲ್ಲರೂ ತಮ್ಮ ರಕ್ತದ ಗುಂಪಿನ ಬಗ್ಗೆ ತಿಳಿದಿರುವದು ಎಷ್ಟು ಅವಶ್ಯವೋ, ಅದರಂತೆ ರಕ್ತದಾನ ಮಾಡುವುದೂ ಅಷ್ಟೇ ಅವಶ್ಯವಿದೆ. ಆರೋಗ್ಯದ ಸಮತೋಲನ ಕಾಯ್ದುಕೊಳ್ಳುವ ದೃಷ್ಟಿಯಿಂದ 18 ವರ್ಷ ಮೇಲ್ಪಟ್ಟವರು ವರ್ಷದಲ್ಲಿ ಕನಿಷ್ಠ 2 ಸಲ ರಕ್ತದಾನ ಮಾಡಬೇಕೆಂದರು.

ಸಮಾರಂಭದಲ್ಲಿ ಡಾ.ದತ್ತಾತ್ರೇಯ ವೈಕುಂಠೆ ಅವರನ್ನು ರೋಟರಿ ಸೆಂಟ್ರಲ್ ಕ್ಲಬ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ರಕ್ತಗುಂಪು ತಪಾಸಣಾ ಶಿಬಿರದಲ್ಲಿ ಸರಕಾರಿ ಪ್ರಾಥಮಿಕ ಶಾಲೆಯ 180 ವಿದ್ಯಾರ್ಥಿಗಳ ಹಾಗೂ ಉರ್ದು ಪ್ರಾಥಮಿಕ ಶಾಲೆಯ 160 ವಿದ್ಯಾರ್ಥಿಗಳ ರಕ್ತಗುಂಪು ತಪಾಸಣೆ ನಡೆಸಿ ಚೀಟಿ ವಿತರಿಸಲಾಯಿತು.

# ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಮುಂಡರಗಿ ಪುರಸಭೆ ವ್ಯಾಪ್ತಿಯಲ್ಲಿನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ 2023-24ನೇ ಸಾಲಿನ ದೀನ ದಯಾಳ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ವೈಯಕ್ತಿಕ ಚಟುವಟಿಕೆಗಳಿಗೆ ಹಾಗೂ ಸ್ವ ಸಹಾಯ ಸಂಘಗಳಿಗೆ ಸಂಪರ್ಕ ಸಾಲ ಯೋಜನೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ನಿಗದಿತ ಅರ್ಜಿ ನಮೂನೆಯನ್ನು ದ್ವಿ ಪ್ರತಿಯಲ್ಲಿ ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ, ಮುಂಡರಗಿ ಈ ವಿಳಾಸಕ್ಕೆ ನವೆಂಬರ್ 29 ರೊಳಗೆ ಸಲ್ಲಿಸಬೇಕು. ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂಪೂರ್ಣ ಅಧಿಕಾರ ಕಾರ್ಯಪಡೆ ಸಮಿತಿ ಹೊಂದಿರುತ್ತದೆ.

ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಿದ್ಯಾರ್ಹತೆ ಪ್ರಮಾಣ ಪತ್ರ, ಪಡಿತರ ಚೀಟಿ/ ಮತದಾರರ ಗುರುತಿನ ಚೀಟಿ/ ರಹವಾಸಿ ಪತ್ರ/ ಆಧಾರ್ ಚೀಟಿ, ಪಾಸ್ ಪೋರ್ಟ್ ಸೈಜ್, ಭಾವಚಿತ್ರಗಳು, ಅನುಭವ ಪ್ರಮಾಣ ಪತ್ರ, ಅರ್ಜಿದಾರರ / ಅರ್ಜಿದಾರರ ಕುಟುಂಬದ ಗುಂಪಿನ ಪಾಸ್ ಪುಸ್ತಕದ ನಕಲು ಪ್ರತಿ. ಇವುಗಳನ್ನು ಲಗತ್ತಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮುಂಡರಗಿ ಪುರಸಭೆ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ.

# ಛಲವಾದಿ ಮಹಾಸಭಾದ ಗೌ.ಕಾರ್ಯದರ್ಶಿಯಾಗಿ ನೇಮಕ

■ವಿಜಯಸಾಕ್ಷಿ ಸುದ್ದಿ, ಗದಗ



ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ರಾಜ್ಯ ಸಮಿತಿಯ ಅಧ್ಯಕ್ಷ, ನಿವೃತ್ತ ಐಎಎಸ್ ಅಧಿಕಾರಿ ಸಿದ್ದಯ್ಯರವರ ಅನುಮೋದನೆ ಮೇರೆಗೆ ಬಳಗಾನೂರ ಗ್ರಾಮದ ಸುರೇಶ ಚಲವಾದಿಯವರನ್ನು ಜಿಲ್ಲಾ ಗೌರವ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಗದಗ ಜಿಲ್ಲಾಧ್ಯಕ್ಷ ಎಲ್.ನಾರಾಯಣಸ್ವಾಮಿರವರು ನೇಮಕಾತಿ ಆದೇಶ ನೀಡಿದ್ದು, ಕೂಡಲೇ ಸಂಘದ ಚಟುವಟಿಕೆಯನ್ನು ಕೈಗೊಂಡು ಸಮಿತಿಗೆ ವರದಿ ಮಾಡಿಕೊಳ್ಳಲು ಕಾರ್ಯಾಧ್ಯಕ್ಷ ರವಿ ಕರಬಸಣ್ಣವರ ತಿಳಿಸಿದ್ದಾರೆ.

### ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ನರೇಗಾ ಯೋಜನೆ ಸಹಕಾರಿ: ಸಹಾಯಕ ನಿರ್ದೇಶಕ ರಿಯಾಜ ಖತೀಬ್

# ವೈಯಕ್ತಿಕ ಕಾಮಗಾರಿ, ನೈಸರ್ಗಿಕ ಸಂಪನ್ಮೂಲ ಅಭಿವೃದ್ಧಿಪಡಿಸುವ ಕಾಮಗಾರಿಗಳಿಗೆ ಆದ್ಯತೆ ನೀಡಿ

■ವಿಜಯಸಾಕ್ಷಿ ಸುದ್ದಿ, ರೋಣ

ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ನರೇಗಾ ಯೋಜನೆ ಸಹಕಾರಿಯಾಗಿದೆ. ಹಾಗಾಗಿ ತಾವೆಲ್ಲಾ ಬಡವರ ಏಳಿಗೆಗಾಗಿ ಹೆಚ್ಚು ಕೆಲಸ ಮಾಡುವ ಮೂಲಕ ಬಡವರ ಸೇವೆ ಮಾಡಿ ಎಂದು ತಾಲೂಕ ಪಂಚಾಯತ ಸಹಾಯಕ ನಿರ್ದೇಶಕ (ಗ್ರಾ.ಉ) ಅಧಿಕಾರಿ ರಿಯಾಜ್ ಖತೀಬ್ ಅಭಿಪ್ರಾಯ ಪಟ್ಟರು.



ತಾಲೂಕ ಪಂಚಾಯತ ಸಭಾಂಗಣದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯ 2024-25ನೇ ಸಾಲಿನ ಕ್ರಿಯಾ ಯೋಜನೆ ತಯಾರಿಸಲು ಹಮ್ಮಿಕೊಂಡ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

"ನರೇಗಾ ಯೋಜನೆ ಗ್ರಾಮೀಣ ಪ್ರದೇಶದ ಜನರಿಗೆ ಒಂದು ವರದಾನ" ಗ್ರಾಮೀಣ ಪ್ರದೇಶದ ಕೂಲಿಕಾರರು ಕೆಲಸಕ್ಕಾಗಿ ಅಲೆದಾಡದೇ ತಮ್ಮ ಸ್ವಂತ ಗ್ರಾಮದಲ್ಲಿಯೇ ಬೇಡಿಕೆಯ ಪ್ರಕಾರ 100 ದಿನಗಳ ಖಾತ್ರಿ ಕೆಲಸವನ್ನು ಪಡೆಯಲು ಸಾಧ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿರಿಯ ನಾಗರಿಕರು, ವಿಧವೆಯರು, ವಿಶೇಷ ಚೇತನರಿಗೆ ನರೇಗಾದಡಿ ದುಡಿಯಲು ಹೆಚ್ಚಿನ ಆದ್ಯತೆ, ಹಿರಿಯ ನಾಗರಿಕರು,ವಿಶೇಷ ಚೇತನರಿಗೆ ಕೆಲಸದ ಪ್ರಮಾಣದಲ್ಲಿ 50% ರಿಯಾಯಿತಿ ಇದೆ. ಇದನ್ನು IEC ಚಟುವಟಿಕೆ ಮೂಲಕ ತಿಳಿಸಲಾಗಿದೆ. ಆದರೂ ಗ್ರಾಮೀಣ ಭಾಗದಲ್ಲಿ ನಿಮ್ಮ ಮಾತು ಜನರು ಕೇಳುತ್ತಾರೆ ಈ ಹಿನ್ನಲೆ ತಾವು ವಿಷಯವನ್ನು ಮುಟ್ಟಿಸಿ ಎಂದರು..

ಈ ವರ್ಷದ ಕ್ರಿಯಾ ಯೋಜನೆಯಲ್ಲಿ ಒಂದು ಲಕ್ಷಕ್ಕೂ ಅಧಿಕ ಗಿಡಗಳನ್ನು ನೆಡವದು ನಮ್ಮ ರೋಣ ತಾಲೂಕ ಪಂಚಾಯತ ಗುರಿ, ನಿಸರ್ಗ ದಿಂದ ನಾವು ತೆಗೆದುಕೊಳ್ಳುವದು ಮಾತ್ರ ಮಾಡುತಿದ್ದೇವೆ ಮರಳಿ ಕೊಡತ್ತಿಲ್ಲಾ ಈ ನಿಟ್ಟಿನಲ್ಲಿ ಗಿಡಗಳನ್ನು ನೆಟ್ಟು ನಾವು ಹಸಿರುಕರಣಕ್ಕೆ ಶ್ರಮಿಸೋಣ ಎಂದರು.

ಈ ಮೊದಲು ಗಿಡಗಳನ್ನು ನೆಟ್ಟು ಪಾಲನೆ-ಪೋಷಣೆ ಮಾಡಿದ ಗ್ರಾಮ ಪಂಚಾಯತಿಗೆ ಹಾಗೂ ಸಿಬ್ಬಂದಿಗಳನ್ನು ಗುರುತಿಸಿ ಅವರಿಗೆ ಸನ್ಮಾನ ಮಾಡುವ ಕೆಲಸವನ್ನು ಮಾನ್ಯ ಶಾಸಕರ ನೇತ್ರತ್ವದಲ್ಲಿ ಮಾಡುವ ಕೆಲಸ ಮಾಡ್ತಾ ಇದ್ದೇವೆ ಎಂದರು.

ನೈಸರ್ಗಿಕ ಸಂಪನ್ಮೂಲ ಅಭಿವೃದ್ಧಿ ಪಡಿಸುವಂತ ಕಾಮಗಾರಿಗಳಾದ ನಾಲಾ ಸುಧಾರಣೆ, ಕೆರೆ ಹೂಳೆತ್ತುವುದು, ಬದು ನಿರ್ಮಾಣ, ಕೃಷಿ ಹೊಂಡ, ಮಳೆ ನೀರು ಕೊಯ್ಲು, ಅರಣ್ಯೀಕರಣ ಕಾಮಗಾರಿಗಳನ್ನು ಶೇ 65% ವರೆಗೆ ತೆಗೆದುಕೊಳ್ಳಲು ಅವಕಾಶ, ಉಳಿದ 35% ನಲ್ಲಿ ಶಾಲಾ ಅಭಿವೃದ್ಧಿ ಕಾಮಗಾರಿಳಾದ ಕಂಪೌಂಡ್, ಅಡುಗೆ ಕೋಣೆ, ಆಟದ ಮೈದಾನ, ಮಳೆ ನೀರು ಕೊಯ್ಲು, ಭೋಜನಾಲಯ, ಶೌಚಾಲಯ ಸೇರಿದಂತೆ ಶಾಲಾ ಅಭಿವೃದ್ಧಿ ಪಡಿಸುವ ಸಮಗ್ರ ಕಾಮಗಾರಿಗಳನ್ನು ಮಾಡಲು ಸೂಚನೆ ನೀಡಿದರು.

ಮಹಿಳಾ ಸ್ವ- ಸಹಾಯ ಸಂಘದ ಚಟುವಟಿಕೆ ಮಾಡಲು ಸಂಜೀವಿನಿ ವರ್ಕ್ ಶೇಡ್ ಕಡ್ಡಾಯವಾಗಿ ಮಾಡಲು ಎಲ್ಲರ ಗಮನಕ್ಕೆ ತಂದರು, ಉಳಿದಂತೆ ಚರಂಡಿ ಮತ್ತು ಇತರೆ ಕಾಮಗಾರಿಗಳನ್ನು ಶೇ 60:40 ಮೀರದಂತೆ ಕಾಮಗಾರಿಗಳನ್ನು ಆಯ್ಕೆ ಮಾಡಿ ಕ್ರಿಯಾ ಯೋಜನೆ ತಯಾರಿಸಲು ಸೂಚನೆ ನೀಡಿದರು.

ತಾಂತ್ರಿಕ ಸಂಯೋಜಕ ಪ್ರವೀಣ ಸೂಡಿ ಮಾತನಾಡಿ, ನರೇಗಾ ಯೋಜನೆಯಡಿ ಕ್ರಿಯಾ ಯೋಜನೆಯಡಿ ಬರುವ ತಾಂತ್ರಿಕ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಾಲೂಕ ಪಂಚಾಯತ ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, DEO, BFT, GKM ನರೇಗಾ ಸಿಬ್ಬಂದಿಗಳು ಹಾಗೂ ತಾಲೂಕ ಪಂಚಾಯತ ಸಿಬ್ಬಂದಿಗಳು ಹಾಜರಿದ್ದರು.

# ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಮುಳಗುಂದ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, 2023-24ನೇ ಸಾಲಿನ ಎಸ್.ಎಫ್.ಸಿ. ಹಾಗೂ ಸಾಮಾನ್ಯ ನಿಧಿ ಶೇ. 24.10, ಶೇ. 7.25% ಹಾಗೂ ಶ 5 ಘಟಕದ ವೈಯಕ್ತಿಕ ಕಾರ್ಯಕ್ರಮದಡಿ ಅನುದಾನವನ್ನು ಕಾಯ್ದಿರಿಸಲಾಗಿದೆ.

ಈ ಅನುದಾನಕ್ಕನುಗುಣವಾಗಿ 7.25 % ಇತರೆ ವರ್ಗದ ಬಡಜನರಿಗೆ ಶಸ್ತ್ರ ಚಿಕಿತ್ಸೆಗೆ ಸಹಾಯಧನ ಸಂದಾಯ, 5 % ವಿಕಲಚೇತನ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ, 24.10 % ಪರಿಶಿಷ್ಟ ಜಾತಿಯ ಬಡಜನರಿಗೆ ಶಸ್ತ್ರಚಿಕಿತ್ಸೆಗೆ ಸಹಾಯಧನ, 24.10 % ಪರಿಶಿಷ್ಟ ಪಂಗಡದ ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯಧನ ಪಾವತಿ ಕುರಿತು ಸೌಲಭ್ಯ ಒದಗಿಸಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಡಿಸೆಂಬರ್ 11 ರೊಳಗಾಗಿ ಅವಶ್ಯಕ ದೃಢೀಕರಿಸಿದ ದಾಖಲೆಗಳೊಂದಿಗೆ ಮುಳಗುಂದ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ ಸಲ್ಲಿಸಬೇಕು. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಮುಳಗುಂದ ಪಟ್ಟಣ ಪಂಚಾಯತ್ ಕಾರ್ಯಾಲಯದ ಸೂಚನಾ ಫಲಕ ವೀಕ್ಷಿಸಿ ಮಾಹಿತಿ ಪಡೆಯಬಹುದಾಗಿದೆ.

# ಡಾ. ವ್ಹಿ.ವ್ಹಿ. ಹಿರೇಮಠರಿಗೆ 'ಶ್ರೇಷ್ಠ ಸಾಹಿತ್ಯ ಗಂಗೋತ್ರಿ' ಪ್ರಶಸ್ತಿ

■ವಿಜಯಸಾಕ್ಷಿ ಸುದ್ದಿ, ಗದಗ



ಬೀದರ್‌ನ ಮಂದಾದ ಕಲಾವಿದರ ವೇದಿಕೆ ವತಿಯಿಂದ ಪಂಚಗ್ರಂಥಗಳ ಲೋಕಾರ್ಪಣೆ ಹಾಗೂ ಡಾ.ವ್ಹಿ.ವ್ಹಿ. ಹಿರೇಮಠರಿಗೆ ಶ್ರೇಷ್ಠ ಸಾಹಿತ್ಯ ಗಂಗೋತ್ರಿ ಪ್ರಶಸ್ತಿ ಪ್ರದಾನ ಸಮಾರಂಭವು ನ.25ರಂದು ಬೀದರ್‌ನ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದ ಬಳಿಯಿರುವ ಮಹಾಲಕ್ಷ್ಮೀ ಸಭಾಂಗಣದಲ್ಲಿ ನಡೆಯಲಿದೆ.

ಡಾ.ವ್ಹಿ.ವ್ಹಿ. ಹಿರೇಮಠರ ಸಾಹಿತ್ಯ ಸೇವೆ, ಸಂಘಟನೆ, ಸಮಾಜಿಕ ಸೇವೆಯನ್ನು ಗುರುತಿಸಿ 'ಶ್ರೇಷ್ಠ ಸಾಹಿತ್ಯ ಗಂಗೋತ್ರಿ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಎಂದು ಮಂದಾರ ಕಲಾವಿದರ ವೇದಿಕೆಯ ಅಧ್ಯಕ್ಷ, ಹಿರಿಯ ಸಾಹಿತಿ ಡಾ. ಎಂ.ಜಿ. ದೇಶಪಾಂಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಕೆಗಾಗಿ ತರಗತಿ ಬಹಿಷ್ಕಾರ



■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದಿಂದ ನ.23ರಂದು ಹಮ್ಮಿಕೊಂಡಿರುವ ಸೇವಾ ಖಾಯಮಾತಿ ಹೋರಾಟವನ್ನು ಬೆಂಬಲಿಸಿ ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಅತಿಥಿ ಉಪನ್ಯಾಸಕರು ಬೇಡಿಕೆಗಳನ್ನು ಈಡೇರಿಸುವವರೆಗೂ ಅತಿಥಿ ಉಪನ್ಯಾಸಕರು ತರಗತಿಗಳನ್ನು ಬಹಿಷ್ಕಾರ ಮಾಡಿ ಹೋರಾಟದಲ್ಲಿ ಪಾಲ್ಗೊಳ್ಳಲಿರುವುದಾಗಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಪ್ರಾಚಾರ್ಯರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅತಿಥಿ ಉಪನ್ಯಾಕರಾದ ಡಾ. ಸುಜಾತಾ ಬರದೂರ, ಸತೀಶ ಸರವಿ, ಕೆ.ಜಿ. ಬೆಂತೂರ, ಎಮ್.ಎಸ್. ಗೌಡರ, ಡಿ.ಪಿ. ಮನಕಟ್ಟಿ, ಶ್ರೀದೇವಿ ದಾಸರ, ಸುಮಿತ್ರಾ ಮೇದಾರ, ರೇಷ್ಮಾ ಹೂಗಾರ, ರಿಯಾಜ ದೊಡ್ಡಮನಿ ಇದ್ದರು.

# ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಕ್ರಮ ವಹಿಸಿ

▶▶ಮೊದಲನೇ ಪುಟದಿಂದ

ಕರೇಜ್ ಅಭಿವೃದ್ಧಿಗಾಗಿ ಸರ್ಕಾರ ಹೆಚ್ಚು ಒತ್ತು ನೀಡುತ್ತಿದ್ದು, ನಗರದಲ್ಲಿನ ಕರೇಜ್ ವ್ಯವಸ್ಥೆಯನ್ನು ಪುನಃ ಪ್ರಾರಂಭಿಸಲಾಗುತ್ತಿದೆ. ಈ ತಿಂಗಳೊಳಗಾಗಿ ಕರೇಜ್ ವ್ಯವಸ್ಥೆ ಆರಂಭಕ್ಕೆ ಆದೇಶ ನೀಡಲಾಗುವುದುದರಿಂದ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು. ಈ ಮೊದಲಿನಂತೆ ಬೋಟ್ ಆರಂಭಿಸುವ ಮೂಲಕ ಹೆಚ್ಚೆಚ್ಚು ಪ್ರವಾಸಿಗರನ್ನು ಆಕರ್ಷಿಸಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಆವರಣದಲಿರುವ ಅರೆಕಿಲ್ಲಾ ಸ್ಮಾರಕ ಸ್ವಚ್ಛವಾಗಿಟ್ಟುಕೊಳ್ಳುವಂತೆ ಸಂಬಂಧಿಸಿದ ಇಲಾಖೆಗೆ ಸೂಚನೆ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ ಅವರು, ಈಗಾಗಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಪ್ರವಾಸೊದ್ಯಮ ಸಮಿತಿ, ಭಾರತೀಯ ಪುರಾತತ್ವ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸೇರಿದಂತೆ ಸಂಬಂಧಿಸಿದ ಇಲಾಖೆಗಳು ಕಾಲಕಾಲಕ್ಕೆ ಸಭೆ ಕರೆದು ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗೆ ಕ್ರಮ ವಹಿಸುವಂತೆ ಸಚಿವರು ಸೂಚನೆ ನೀಡಿದರು.



ಸಭೆಯಲ್ಲಿ ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ಸಿಂದಗಿ ಶಾಸಕ ಅಶೋಕ ಮನಗೂಳಿ, ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ರಾಮಪ್ರಸಾತ್ ಮನೋಹರ, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ವಿಜಯಪುರ ಉಪವಿಭಾಗಾಧಿಕಾರಿ ಬಸವಣೆಪ್ಪ ಕಲಶೆಟ್ಟಿ, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ ಭಜಂತ್ರಿ, ವಿಜಯಪುರ ತಹಸೀಲ್ದಾರ ಕವಿತಾ, ಭಾರತೀಯ ಪುರಾತತ್ವ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕೊಪ್ಪಳದ ಪೂಜ್ಯ ಗವಿಸಿದ್ಧೇಶ್ವರ ಮಹಾಸ್ವಾಮಿಗಳ ಪ್ರವಚನ ಕಾರ್ಯಕ್ರಮದ ಪೂರ್ವಭಾವಿ ಸಭೆ

# ಸಂಸ್ಕಾರ ಸಂವರ್ಧನೆಯ ಕಾರ್ಯಕ್ರಮ ಯಶಸ್ವಿಗೊಳಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ವಿದ್ಯಾದಾನ ಸಮಿತಿಯ ಮೈದಾನದಲ್ಲಿ ನ.24ರಿಂದ ಡಿಸೆಂಬರ್ 3ರವರೆಗೆ ಪ್ರತಿದಿನ ಸಂಜೆ 6ರಿಂದ 7 ಗಂಟೆಯವರೆಗೆ 10 ದಿನಗಳ ಕಾಲ ಕೊಪ್ಪಳ ಸಂಸ್ಥಾನ ಗವಿಮಠದ ಪೂಜ್ಯ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳ ಆಧ್ಯಾತ್ಮ ಪ್ರವಚನ, ಪ್ರತಿದಿನ ಬೆಳಿಗ್ಗೆ 6.30 ಗಂಟೆಗೆ ಸದ್ಭಾವನಾ ಪಾದಯಾತ್ರೆ ನಡೆಯಲಿದೆ ಎಂದು ಆಧ್ಯಾತ್ಮ ಪ್ರವಚನ ಸಮಿತಿಯ ಅಧ್ಯಕ್ಷರೂ, ಗದಗ ಮಾಜಿ ಶಾಸಕರೂ ಆದ ಡಿ.ಆರ್. ಪಾಟೀಲ ಹೇಳಿದರು.

ಮಂಗಳವಾರ ನಗರದ ಜ.ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ಪ್ರವಚನ ಮಾಲಿಕೆ, ಸದ್ಭಾವನಾ ಪಾದಯಾತ್ರೆ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗದುಗಿನಲ್ಲಿ ನಡೆಯುತ್ತಿರುವ ಈ ಆಧ್ಯಾತ್ಮ ಪ್ರವಚನ, ಸದ್ಭಾವನಾ ಪಾದಯಾತ್ರೆಯನ್ನು ಸರ್ವಧರ್ಮ ಸಮಾಜಬಾಂಧವರು ಕುಟುಂಬ ಸಮೇತ ಪಾಲ್ಗೊಳ್ಳುವ ಮೂಲಕ ಯಶಸ್ವಿಗೊಳಿಸಲು ಮನವಿ ಮಾಡಿಕೊಂಡರು.

> ಜನತೆಯಲ್ಲಿ ಧರ್ಮ ಜಾಗೃತಿ, ಭಾರತೀಯ ಸಂಸ್ಕೃತಿ, ಸಂಸ್ಕಾರ ಸಂವರ್ಧನೆಗೊಳಿಸಲು, ಯುವಜನಾಂಗವನ್ನು ದುಶ್ಚಟಗಳಿಂದ ದೂರೀಕರಿಸಿ ಸದ್ಭಾವನೆ ಮೂಡಿಸುವ ಸದ್ಭಾವನಾ ಪಾದಯಾತ್ರೆಯು ನ. 25ರಿಂದ ನ.28ರವರೆಗೆ ಗದಗ-ಬೆಟಗೇರಿ ಅವಳಿ ನಗರದಲ್ಲಿ ಹಾಗೂ ನ.29ರಿಂದ ಡಿ.3ರವರೆಗೆ ಡಂಬಳ, ಲಕ್ಕುಂಡಿ, ಹುಯಿಲಗೋಳ, ಕಬಲಾಯತಕಟ್ಟಿ, ಹುಲಕೋಟಿ ಗ್ರಾಮೀಣ ಪ್ರದೇಶಗಳಲ್ಲಿ ನಡೆಯಲಿದೆ ಎಂದು ಡಿ.ಆರ್. ಪಾಟೀಲ ವಿವರಣೆ ನೀಡಿದರು.

ಸಭೆಯಲ್ಲಿ ಚಂದ್ರು ಬಾಳಿಹಳ್ಳಿಮಠ, ಸಂಗಣ್ಣ ಗಡಗಿ, ಶೇಖಣ್ಣ ಗದ್ದಿಕೇರಿ, ಗುರಣ್ಣ ಬಳಗಾನೂರ, ಕೆ.ಎಚ್. ಬೇಲೂರ, ಬಾಲಚಂದ್ರ ಭರಮಗೌಡ್ರ, ಬಸವರಾಜ ಕೊರ್ಲಹಳ್ಳಿ ಮುಂತಾದವರು ಸಲಹೆ-ಸೂಚನೆ ನೀಡಿದರು.

ಸಭೆಯಲ್ಲಿ ಶಿವಯ್ಯ ನಾಲತ್ವಾಡಮಠ, ಪ್ರಕಾಶ ಬೊಮ್ಮನಹಳ್ಳಿ, ಅಮರೇಶ ಗಡಗಿ, ವ್ಹಿ.ಆರ್. ಗೋವಿಂದಗೌಡ್ರ, ಬಸಣ್ಣ ಉಮಚಗಿ, ಮುರುಘರಾಜೇಂದ್ರ ಬಡ್ನಿ, ರಾಘವೇಂದ್ರ ಕಾಲವಾಡ, ಪ್ರವೀಣ ಪಾಟೀಲ, ಸಿ.ಕೆ. ಕಡಣಿ, ನಿಂಗಪ್ಪ ಹೈದ್ರಿ, ಶಾಂತಣ್ಣ ಅಕ್ಕಿ, ಈಶಣ್ಣ ಭೂಸದ, ವಿನೋದ ಶಿದ್ಲಿಂಗ್, ಅನಿಲಕುಮಾರ ಪಾಟೀಲ, ಚನ್ನಬಸವ ಅಕ್ಕಿ, ಅಶೋಕ ಗಡಾದ, ಜಗತಾಪ, ನಿಂಗಪ್ಪ ಕಟ್ಟಿಮನಿ, ರಫೀಕ್ ಜಮಾಲಖಾನವರ, ಜುನೇದ ಉಮಚಗಿ, ಶಿವಲೀಲಾ ಅಕ್ಕಿ, ಜಯಶ್ರೀ ಪಾಟೀಲ, ಲಲಿತಾ ಉಮನಾಬಾದಿ, ಸುವರ್ಣಾ ಹೊಸಂಗಡಿ, ಗೀತಾಂಜಲಿ ಗೌಡರ, ಶಕುಂತಲಾ ಸಿಂಧೂರ ಮುಂತಾದವರು ಪಾಲ್ಗೊಂಡಿದ್ದರು.

ವಿಜಯಪುರ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳನ್ನು ವೀಕ್ಷಿಸಿದ ಸಚಿವ ಎಚ್.ಕೆ. ಪಾಟೀಲ

# ಸ್ಮಾರಕಗಳ ಸಂರಕ್ಷಣೆಗೆ ಅಗತ್ಯ ಕ್ರಮ

■ ವಿಜಯಸಾಕ್ಷಿ ಸುದ್ದಿ, ವಿಜಯಪುರ

ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲರು 'ನಮ್ಮ ಸ್ಮಾರಕ ದರ್ಶನ ಮತ್ತು ಸಂರಕ್ಷಣೆಗಾಗಿ ಪ್ರವಾಸ' ಕಾರ್ಯಕ್ರಮದ ಅಂಗವಾಗಿ ಪ್ರವಾಸೋದ್ಯಮ ಇಲಾಖೆಯ ಬಸ್ ಮೂಲಕ ಪ್ರವಾಸ ಕೈಗೊಂಡು, ವಿಜಯಪುರದ ವಿವಿಧ ಐತಿಹಾಸಿಕ ಸ್ಮಾರಕಗಳ ವೀಕ್ಷಣೆ ಮಾಡಿ, ಸ್ಮಾರಕಗಳಲ್ಲಿ ಅಳವಡಿಸಲಾಗಿರುವ ಕಲೆ, ಶಿಲ್ಪಕಲೆ, ಸಂಸ್ಕೃತಿಯನ್ನು ಬಿಂಬಿಸುವ ಚಿತ್ರಕಲೆಯನ್ನು ವೀಕ್ಷಿಸಿ, ಐತಿಹಾಸಿಕ ಸ್ಮಾಕರಗಳ ಸಂರಕ್ಷಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.



ಮಂಗಳವಾರ ಬೆಳಿಗ್ಗೆ ಮುತ್ತಗಿಯಲ್ಲಿರುವ ಸ್ಮಾರಕ ಹಾಗೂ ದೇವಾಲಯಗಳ ವೀಕ್ಷಣೆ ನಡೆಸಿ, ವಿಜಯಪುರಕ್ಕೆ ಆಗಮಿಸಿದ ಸಚಿವರು, ಐತಿಹಾಸಿಕ ಸ್ಮಾರಕದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ, ಆದಿಲ್ ಶಾಹಿ ದರ್ಬಾರ್ ಹಾಲ್, ಜಿಲ್ಲಾ ಖಜಾನೆ ಕಚೇರಿ, ಆಡಳಿತಾತ್ಮಕ ಸಭಾಂಗಣಗಳು, ಶೇಖರಣಾ ಕಚೇರಿಗಳು, 7 ಅಂತಸ್ತಿನ ಆದಿಲ್ ಶಾಹಿ ಅರಮನೆ ಸಾತಮಂಜಿಲ್, ಜಲಮಹಲ್, ನರಸಿಂಹ ದೇವಸ್ಥಾನ, ಆನಂದ ಮಹಲ್, ಗಗನ್ ಮಹಲ್, ಪಾರ್ಶನಾಥ ಮಂದಿರ, ಹಳೆ ತಹಸೀಲ್ದಾರ ಕಚೇರಿ ಸೇರಿದಂತೆ ವಿವಿಧ ಐತಿಹಾಸಿಕ ಸ್ಮಾರಕಗಳ ವೀಕ್ಷಣೆ ನಡೆಸಿ, ಅಧಿಕಾರಿಗಳು ಹಾಗೂ ಮಾರ್ಗದರ್ಶಕರಿಂದ ಐತಿಹಾಸಿಕ ಸ್ಮಾರಕಗಳಲ್ಲಿ ಅಳವಡಿಸಲಾದ ಶಿಲ್ಪಕಲೆ, ಸಂಸ್ಕೃತಿ, ಕಲಾಕೃತಿ ಕುರಿತು ಸೂಕ್ತ ಮಾಹಿತಿ ಪಡೆದುಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿಜಯಪುರ ದೇಶದಲ್ಲಿಯೇ ಅತಿ ಹೆಚ್ಚು ಸ್ಮಾರಕ ಹೊಂದಿರುವ ಐತಿಹಾಸಿಕ ನಗರ. ಇಲ್ಲಿ ಹಲವಾರು ಸ್ಮಾರಕಗಳಿವೆ. ಸ್ಮಾರಕಗಳ ರಕ್ಷಣೆ, ಸಂರಕ್ಷಣೆ ಅಗತ್ಯವಾಗಿದೆ. ಕರ್ನಾಟಕದಲ್ಲಿನ ಸ್ಮಾರಕಗಳ ದರ್ಶನ ಮಾಡಲು ಹಾಗೂ ಅವುಗಳ ಸಂರಕ್ಷಣೆಗಾಗಿ ನಮ್ಮ ಸ್ಮಾರಕ ದರ್ಶನ ಮತ್ತು ಸಂರಕ್ಷಣೆಗಾಗಿ ಪ್ರವಾಸ ಕೈಗೊಂಡು ಕಲ್ಬುರ್ಗಿ, ಯಾದಗಿರಿ, ಬಾಗಲಕೋಟೆ ಜಿಲ್ಲೆಯ ಐಹೊಳೆ, ಇದೀಗ ವಿಜಯಪುರದ ಮುತ್ತಗಿಯಿಂದ ಆರಂಭಿಸಿದ್ದೇನೆ. ಇತಿಹಾಸ ತಜ್ಞರೊಂದಿಗೆ ಚರ್ಚೆ ಮಾಡಿ, ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ, ಸ್ಮಾರಕಗಳ ಸಂರಕ್ಷಣೆಗಾಗಿ ಕೈಗೊಳ್ಳಬೇಕಾದ ಕಾರ್ಯಗಳ ಕುರಿತು ಚಿಂತನೆ ನಡೆಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಸದ ರಮೇಶ ಜಿಗಜಿಣಗಿ, ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ಸಿಂದಗಿ ಶಾಸಕರಾದ ಅಶೋಕ ಮನಗೂಳಿ, ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ರಾಮಪ್ರಸಾತ್ ಮನೋಹರ, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ, ಉಪವಿಭಾಗಾಧಿಕಾರಿ ಬಸವಣ್ಣಪ್ಪ ಕಲಶೆಟ್ಟಿ, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ ಭಜಂತ್ರಿ ಸೇರಿದಂತೆ ಪ್ರವಾಸೋದ್ಯಮ ಹಾಗೂ ಪುರಾತತ್ವ ಇಲಾಖೆಯವ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

## ಗಮನ ಸೆಳೆದ ವಿದೇಶಿ ಪ್ರವಾಸಿಗರು

ಪ್ರವಾಸೋದ್ಯಮ ಇಲಾಖೆ ಸಚಿವರಾದ ಎಚ್.ಕೆ. ಪಾಟೀಲ ಅವರು ಐತಿಹಾಸಿಕ ಸ್ಮಾರಕಗಳನ್ನು ವೀಕ್ಷಣೆ ಮಾಡುತ್ತಿರುವ ಸಂದರ್ಭದಲ್ಲಿ ಸಚಿವರನ್ನು ಭೇಟಿ ಮಾಡಿದ ಅಮೇರಿಕಾ ದೇಶದ ಪ್ರವಾಸಿಗರು, ಜಿಲ್ಲೆಯು ಸುಂದರವಾದ ಸ್ಮಾರಕಗಳನ್ನು ಹೊಂದಿರುವ ಕುರಿತು ಹಾಗೂ ಇಲ್ಲಿನ ಜನರ ಸಂಸ್ಕೃತಿ, ಭಾಷೆ, ನಡವಳಿಕೆಯಿಂದ ಪ್ರಭಾವಿತವಾಗಿರುವ ಕುರಿತು ತಮ್ಮ ಅನಿಸಿಕೆಗಳನ್ನು ಕನ್ನಡದಲ್ಲಿಯೇ ಹಂಚಿಕೊಂಡು ಗಮನ ಸೆಳೆದರು.

ವಿಶ್ವ ವಿಕಲಚೇತನರ ದಿನಾಚರಣೆ ನಿಮಿತ್ತ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆ

# ವಿಕಲಚೇತನರಿಗೆ ಅನುಕಂಪ ಬೇಡ, ಅವಕಾಶ ಕೊಡಿ

■ ವಿಜಯಸಾಕ್ಷಿ ಸುದ್ದಿ, ಗದಗ

ವಿಕಲಚೇತನರಿಗೆ ಅನುಕಂಪ ಬೇಡ. ಅವಕಾಶ ಕೊಡಿ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ತಿಳಿಸಿದರು.



ಗದಗ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜಿಲ್ಲೆಯಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಸೇವಾನಿರತ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ- 2023ರ ಪ್ರಯುಕ್ತ ಮಂಗಳವಾರದಂದು ನಗರದ ಕೆ. ಎಚ್. ಪಾಟೀಲ್ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡ ಜಿಲ್ಲಾ ಮಟ್ಟದಲ್ಲಿ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಕಾಯ್ದೆ ಕುರಿತು ತಿಳುವಳಿಕೆ ಇರಬೇಕು. ಜಿಲ್ಲೆಯಲ್ಲಿ ಈ ಕಾಯ್ದೆಯಡಿ ವಿಕಲಚೇತನರ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ, ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಗೆಲವು-ಸೋಲು ಮುಖ್ಯವಲ್ಲ, ಎಲ್ಲ ವಿಕಲಚೇತನರು ಉತ್ಸಾಹದಿಂದ ಕ್ರೀಡೆಯಲ್ಲಿ ಪಾಲ್ಗೊಳ್ಳುವುದು ಮುಖ್ಯವಾಗಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪರಶುರಾಮ ವೈ ಶೆಟ್ಟೆಪ್ಪನವರ ಪ್ರಾಸ್ತಾವಿಕವಾಗಿ ಮಾತನಾಡಿ, ಇಲಾಖೆಯಿಂದ ಜಾರಿಗೊಂಡಿರುವ ವಿವಿಧ ಯೋಜನೆಗಳ ಸದುಪಯೋಗವನ್ನು ವಿಕಲಚೇತನರು ಪಡೆಯಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘ-ಸಂಸ್ಥೆಗಳ ಮುಖ್ಯಸ್ಥರುಗಳು, ಸಿಬ್ಬಂದಿಗಳು ನಗರದ ಪಂಡಿತ ಪುಟ್ಟರಾಜ ಗವಾಯಿಗಳರವರ ಅಂಧರ ವಸತಿಯುತ ಸಂಗೀತ ಪಾಠ ಶಾಲೆ, ಹೊಳೆ ಆಲೂರು ಜ್ಞಾನಸಿಂಧು ಅಂಧ ಮಕ್ಕಳ ವಸತಿಯುತ ವಿಶೇಷ ಶಾಲೆ, ಲಕ್ಷ್ಮೇಶ್ವರ ಕಿವುಡ ಮಕ್ಕಳ ವಸತಿಯುತ ವಿಶೇಷ ಶಾಲೆ ಹಾಗೂ ಅರಳು ವಿಶೇಷ ಅಗತ್ಯವುಳ್ಳ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ವಿಶೇಷ ಶಾಲೆಯ ಮುಖ್ಯಸ್ಥರುಗಳು, ವಿಕಲಚೇತನರ ಇಲಾಖೆಯ ಸಿಬ್ಬಂದಿಗಳು ಹಾಗೂ ಜಿಲ್ಲೆಯ ಎಮ್.ಆರ್.ಡಬ್ಲ್ಯೂ.ವಿ.ಆರ್.ಡಬ್ಲ್ಯೂ & ಯು.ಆರ್.ಡಬ್ಲ್ಯೂಗಳು, ವಿವಿಧ ವಿಕಲತೆಯನ್ನು ಹೊಂದಿರುವ ವಿಕಲಚೇತನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು, ಗುಂಡು ಎಸೆಯುವುದರ ಮೂಲಕ ಕ್ರೀಡಾ ಸ್ಪರ್ಧೆಗಳಿಗೆ ಚಾಲನೆ ನೀಡಲಾಯಿತು,

ಕುಮಾರಿ ಸಂಗೀತಾ ಭರಮಗೌಡ್ರ ಪ್ರಾರ್ಥಿಸಿದರು. ಕಿವುಡ ಮಕ್ಕಳ ವಸತಿಯುತ ವಿಶೇಷ ಶಾಲೆಯ ಡಿ ಜಿ. ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ಮಹಾಂತೇಶ ಸರ್ವರನ್ನು ಸ್ವಾಗತಿಸಿದರು. ನೋಡಲ್ ಅಧಿಕಾರಿ ಪ್ರಕಾಶ್ ಗಾಣಿಗೇರ ವಂದಿಸಿದರು.

# ಹೆಣ್ಣು ಮಗುವನ್ನು ಉಳಿಸಿ ಸಮತೋಲನ ಕಾಪಾಡಿಕೊಳ್ಳಬೇಕಿದೆ




■ ವಿಜಯಸಾಕ್ಷಿ ಸುದ್ದಿ, ಗದಗ

ಗಂಡು ಮತ್ತು ಹೆಣ್ಣಿನ ಜನಸಂಖ್ಯಾ ಅನುಪಾತದಲ್ಲಿ ಹೆಣ್ಣಿನ ಸಂಖ್ಯೆ ಕಡಿಮೆ ಆಗಿರುವುದು ಆತಂಕಕಾರಿ ವಿಷಯವಾಗಿದೆ. ಹೆಣ್ಣು ಮಗುವನ್ನು ಉಳಿಸಿ ಸಮತೋಲನ ಕಾಪಾಡಿಕೊಳ್ಳಬೇಕಿದೆ ಎಂದು ಸಂಕನೂರ ಆಸ್ಪತ್ರೆಯ ನಿರ್ದೇಶಕರಾದ ಡಾ. ಶ್ವೇತಾ ಸಂಕನೂರ ಹೇಳಿದರು.

ಸಂಕನೂರ ಶುಶ್ರೂಷಾ ಮಹಾವಿದ್ಯಾಲಯ ಹಾಗೂ ಭಾರತೀಯ ಮಕ್ಕಳ ವೈದ್ಯಕೀಯ ಸಂಘ ಕರ್ನಾಟಕ ಗದಗ ಶಾಖೆ ಇವರ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 'ವಿಶ್ವ ಹೆಣ್ಣು ಮಗುವಿನ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣು ಮಕ್ಕಳ ಸಂಖ್ಯೆ ಗಣನೀಯವಾಗಿ ಕುಂಠಿತವಾಗಿರುವುದು ಹೆಣ್ಣು ಮಕ್ಕಳಿಗಲ್ಲದೇ ಗಂಡು ಮಕ್ಕಳಿಗೂ ಮಾರಕವಾಗಲಿದೆ. ಜನಸಂಖ್ಯೆಗೆ ಅನುಗುಣವಾಗಿ ಗಂಡು ಮತ್ತು ಹೆಣ್ಣು ಇಬ್ಬರೂ ಸಮಾನವಾಗಿರಬೇಕು ಎಂದು ಹೇಳಿದರು.

ಡಾ. ಈರಣ್ಣ ಹಳೇಮನಿ ಮಾತನಾಡಿ, ಸಮಾಜದಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿರುವ ಅಸಮಾನತೆಗಳ ಬಗ್ಗೆ ಜಾಗೃತಿ ಮೂಡಿಸಿದರು. ಸಿದ್ದಲಿಂಗೇಶ್ವರ ಹದಿಹರೆಯರ ಆಪ್ತ ಸಮಾಲೋಚಕರು, ಸಂಕನೂರು ಶುಶ್ರೂಷಾ ಮಹಾವಿದ್ಯಾಲಯದ ಪ್ರಾಧ್ಯಾಪಕರು, ಸಿಬ್ಬಂದಿಗಳು, ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ರಶ್ಮಿ ವಿನ್ಸೆಂಟ್ ಪಾಟೀಲ ಸ್ವಾಗತಿಸಿದರು. ಡಾ. ರೂಪಾ ಹುಯಿಲಗೋಳ ನಿರೂಪಿಸಿದರು.

# ಆರೋಪಿತನಿಗೆ ಶಿಕ್ಷೆ ಪ್ರಕಟ

■ ವಿಜಯಸಾಕ್ಷಿ ಸುದ್ದಿ, ಗದಗ

ತಮ್ಮ ಜಮೀನಿನಲ್ಲಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆಸಿದ್ದ ಆರೋಪಿತನಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

15-10-2020ರಂದು ಪ್ರಕರಣದ ಫಿರ್ಯಾಧಿದಾರರು ಉಳಿದ ಸಾಕ್ಷಿದಾರರೊಂದಿಗೆ ಮುಂಡರಗಿ ತಾಲೂಕಿನ ಹಿರೇವಡ್ಡಟ್ಟಿ ಗ್ರಾಮದಲ್ಲಿರುವ ಭೋವಿ ಸಮಾಜದ ಸ್ಮಶಾನದ ಹತ್ತಿರದಲ್ಲಿರುವ ಜಮೀನು ರಿ.ಸ.ನಂ. 246/3 ನೇದ್ದರ ಗೋವಿನ ಜೋಳದ ಬೆಳೆಯ ಮಧ್ಯದಲ್ಲಿ ಅಕ್ರಮ ಗಾಂಜಾ ಬೆಳೆದಿರುವ ಮಾಹಿತಿ ಆಧರಿಸಿ ದಾಳಿ ಮಾಡಿದ್ದು, ದಾಳಿಯ ಸಂಧರ್ಭದಲ್ಲಿ ಪ್ರಕರಣದ ಆರೋಪಿ ಸಂಜೀವಪ್ಪ ದೇವಪ್ಪ ಗುಂಡಿಕೇರಿ ತನ್ನ ಜಮೀನಿನಲ್ಲಿ 7 ಗಾಂಜಾ ಗಿಡಗಳನ್ನು ಅಕ್ರಮವಾಗಿ ಬೆಳೆಸಿರುವುದು ಪತ್ತೆಯಾಗಿತ್ತು.




ಅವುಗಳನ್ನು ತೂಕ ಮಾಡಲಾಗಿ 1.285 ಕೆ.ಜಿ. ಇದ್ದು ಗಾಂಜಾ ಗಿಡಗಳನ್ನು ಯಾವುದೇ ಪರವಾನಿಗೆ ಇಲ್ಲದೆ ತನ್ನ ಸ್ವಂತ ಲಾಭಕ್ಕೋಸ್ಕರ ಅನಧಿಕೃತವಾಗಿ ಬೆಳೆದಿದ್ದು, ಸದರಿ ಅಪರಾಧ ಕುರಿತು ಆರೋಪಿತನ ವಿರುದ್ಧ ಮುಂಡರಗಿಯ ಅಬಕಾರಿ ನಿರೀಕ್ಷಕ ದೀಪಕ್ ಎಸ್. ತನಿಖೆಯನ್ನು ಪೂರೈಸಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಸಾಕ್ಷಿ ವಿಚಾರಣೆ ನಡೆಸಿದ ಗದಗಿನ ಮಾನ್ಯ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರ ಎಸ್.ಶೆಟ್ಟಿ ಸದರ ಪ್ರಕರಣದಲ್ಲಿ ಆರೋಪ ರುಜುವಾತು ಆಗಿದ್ದರಿಂದ ಆರೋಪಿತನಿಗೆ ನ.15 ರಂದು ಕಲಂ: 20(ಎ), 8(ಸಿ) ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ 1 ವರ್ಷ ಕಠಿಣ ಶಿಕ್ಷೆ ಹಾಗೂ 5 ಸಾವಿರ ರೂ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಸದರಿ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಮಲ್ಲಿಕಾರ್ಜುನಗೌಡ ಬಸವನ ಗೌಡ ದೊಡ್ಡಗೌಡ್ರ ಸಾಕ್ಷಿ ವಿಚಾರಣೆ ಮಾಡಿ, ವಾದವನ್ನು ಮಂಡಿಸಿದ್ದರು.

## ನಿಧನ ವಾರ್ತೆ

### ಲಕ್ಷ್ಮೀಬಾಯಿ ಗಣಪತಸಾ ಬದಿ



ಲಕ್ಷ್ಮೇಶ್ವರ, ಪಟ್ಟಣದ ಬಸ್ತಿಬಣದ ಎಸ್‌ಎಸ್‌ಕೆ ಸಮಾಜದ ಹಿರಿಯರಾದ ಲಕ್ಷ್ಮೀಬಾಯಿ ಗಣಪತಸಾ ಬದಿ (84) ನ.22ರ ಸಂಜೆ ನಿಧನರಾದರು.

ಮೃತರಿಗೆ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವಿದೆ.

ಗಣಿತ ಸ್ಪರ್ಧೆಯ ತಾಲೂಕಾ ಮಟ್ಟದ ಸಾಂಕೇತಿಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಕೃಷ್ಣಪ್ಪ ಧರ್ಮರ

# ಗುಣಾತ್ಮಕ ಶಿಕ್ಷಣಕ್ಕೆ ಸಮುದಾಯದ ಸಹಭಾಗಿತ್ವ ಅವಶ್ಯ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಯಾವುದೇ ಕಾರ್ಯ ಯಶಸ್ವಿಯಾಗಲು ಸಮುದಾಯದ ಸಹಕಾರ ಅತ್ಯಗತ್ಯ. ಶಾಲೆಗಳು ಸಮುದಾಯದ ಕನ್ನಡಿಯಿದ್ದಂತೆ. ಸಮುದಾಯದ ಸಮರ್ಥ ಸಹಭಾಗಿತ್ವದಿಂದ ಗುಣಾತ್ಮಕ ಶಿಕ್ಷಣ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಮುದಾಯದ ಕೊಡುಗೆ ಮಹತ್ವದ್ದಾಗಿದೆ ಎಂದು ಲಕ್ಷ್ಮೇಶ್ವರ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ ಧರ್ಮರ ಅಭಿಪ್ರಾಯಪಟ್ಟರು.



ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಶಿರಹಟ್ಟಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅಕ್ಷರ ಫೌಂಡೇಶನ್ ಮತ್ತು ಗ್ರಾ.ಪಂ ಅಡ್ರಕಟ್ಟಿ ಇವರ ಸಂಯುಕ್ತ ಆಶ್ರಯದಲ್ಲಿ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಅಡ್ರಕಟ್ಟಿಯಲ್ಲಿ ಹಮ್ಮಿಕೊಂಡ ಶಾಲಾ ಮಕ್ಕಳ ಗಣಿತ ಸ್ಪರ್ಧೆಯ ತಾಲೂಕಾ ಮಟ್ಟದ ಸಾಂಕೇತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗಣಿತ ಕಬ್ಬಿಣದ ಕಡಲೆ ಎನ್ನುವ ಮಾತಿದೆ. ಆದರೆ ಅದು ಬಹಳ ಸರಳವಾದ ವಿಷಯವಾಗಿದ್ದು, ಅದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಅವ್ಯಕ್ತ ಭಯವಿದೆ. ಅದನ್ನು ಅರಿತುಕೊಂಡು ಕಲಿತರೆ ಹೆಚ್ಚು ಸುಲಭವಾಗಿ ಅರ್ಥವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಗ್ರಾ.ಪಂ ಅಧ್ಯಕ್ಷೆ ಪ್ರೇಮಕ್ಕ ಲಮಾಣಿ, ಅಡರಕಟ್ಟಿ ಗ್ರಾ.ಪಂ ವ್ಯಾಪ್ತಿಯಲ್ಲಿನ ಅಡರಕಟ್ಟಿ, ಹರದಗಟ್ಟಿ ಹಾಗೂ ಕೊಂಡಿಕೊಪ್ಪ ಸರ್ಕಾರಿ ಶಾಲೆಗಳಲ್ಲಿ ಪಂಚಾಯಿತಿಯಿಂದ ಗುಣಾತ್ಮಕ ಶಿಕ್ಷಣಕ್ಕಾಗಿ ಸರ್ವ ರೀತಿಯಿಂದ ಸಹಕಾರ ನೀಡಲಾಗುತ್ತಿದೆ ಎಂದರು.

> ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ. ಮುಂದಿನಮನಿ ಮಾತನಾಡಿ, ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕುಗಳ 28 ಗ್ರಾ.ಪಂ.ಗಳ ಪೈಕಿ 121 ಶಾಲೆಗಳಲ್ಲಿನ 4, 5 ಹಾಗೂ 6ನೇ ತರಗತಿಗಳ ಒಟ್ಟು 4,465 ವಿದ್ಯಾರ್ಥಿಗಳಿಗೆ ಇಂದು ಪಂಚಾಯಿತಿ ಮಟ್ಟದಲ್ಲಿ ಏಕಕಾಲಕ್ಕೆ ಗಣಿತ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಿ.ಎಚ್. ಪಾಟೀಲ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಎಸ್. ಹರ್ಲಾಪುರ, ಚಂದ್ರು ನೇಕಾರ, ಎಸ್‌ಡಿಎಂಸಿ ಅಧ್ಯಕ್ಷೆ ಜಯಶ್ರೀ ಭಂಗಿ, ಸದಸ್ಯ ಕುಮಾರ ಚಕ್ರಸಾಲಿ, ತಾಲೂಕಾ ನೋಡಲ್ ಬಿಆರ್‌ಪಿ ಈಶ್ವರ ಮೆಡ್ಲೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಗ್ರಾ.ಪಂ ಸದಸ್ಯರಾದ ಗಣೇಶ ಲಮಾಣಿ, ಪಿಡಿಓ ಸವಿತಾ ಸೋಮಣ್ಣವರ, ಗ್ರಾ.ಪಂ ಕಾರ್ಯದರ್ಶಿ ಎಸ್. ಕೆ. ಡಂಬಳ, ಎಂ.ಎಸ್. ಹಿರೇಮಠ ವೇದಿಕೆಯಲ್ಲಿದ್ದರು. ಮುಖ್ಯೋಪಾಧ್ಯಾಯೆ ಎಸ್.ಎಚ್. ಉಮಚಗಿ ಸ್ವಾಗತಿಸಿದರು.

ಡಿ.ಡಿ. ಲಮಾಣಿ ನಿರೂಪಿಸಿದರು. ಪಿ.ಸಿ. ಕಾಳಶೆಟ್ಟಿ ವಂದಿಸಿದರು. ಶಿಕ್ಷಕರಾದ ಎಂ.ವಾಯ್. ನೀಲನಾಯ್ಕರ್, ಎಸ್.ಕೆ. ಅಮ್ಮಿನಭಾವಿ, ಎಸ್.ಸಿ. ಹಿರೇಮಠ, ಎಸ್.ಎಂ. ಕೌಜಗೇರಿ, ಪಿ.ಬಿ. ಗುರುಮಠ, ಎನ್. ಎಫ್. ಸಜ್ಜನರ, ಎಸ್.ಆರ್. ನದಾಫ್, ಪಿ.ಪಿ. ಸುಗನಹಳ್ಳಿ ಮುಂತಾದವರು ಹಾಜರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka